


International Journal of Kannada Research
www.kannadajournal.com

**ISSN: 2454–5813**
IJKR 2019; 5(1): 160-166
© 2019 IJKR
www.kannadajournal.com
Received: 10-11-2018
Accepted: 15-12-2018

**ರಾಜು**
ಸಂಶೋಧನ ವಿದ್ಯಾರ್ಥಿ,
ಕ.ವಿ.ವಿ.ಧಾರವಾಡ

**Correspondence**
**ರಾಜು**
ಸಂಶೋಧನ ವಿದ್ಯಾರ್ಥಿ,
ಕ.ವಿ.ವಿ.ಧಾರವಾಡ

# ಪಾಟೀಲ ಪುಟ್ಟಪ್ಪನವರ ದೃಷ್ಟಿಯಲ್ಲಿ ಉತ್ತಮ ಮಾನವರಿಗಿರಬೇಕಾದ ಗುಣಸ್ವಭಾವಗಳು

**ರಾಜು**

ಪಾಟೀಲ ಪುಟ್ಟಪ್ಪನವರು ಕನ್ನಡ ನಾಡು ಕಂಡ ಖ್ಯಾತ ಪತ್ರಿಕೋಧ್ಯಮಿಗಳಲ್ಲಿ ಒಬ್ಬರು. ಅಲ್ಲದೆ ಉತ್ತಮ ಬರಹಗಾರರು ಹೌದು. ಇವರು ತಮ್ಮ ಜೀವನದಲ್ಲಿ ಸುತ್ತಮುತ್ತಲಿನ ಪರಿಸರದಲ್ಲಿ ಕಂಡ ಜನರ ಸ್ವಭಾವಗಳನ್ನೇ ತಮ್ಮ ಬರವಣಿಗೆಯಲ್ಲಿ ಪಡಿಮೂಡಿಸಿದ್ದಾರೆ. ಮಾನವನು ಮೊದಲು ಮಾನವನಾಗಬೇಕೆಂಬುದೇ ಈ ಪರಿಕಲ್ಪನೆಗಳ ಹಿಂದಿರುವ ಉದ್ದೇಶವನ್ನು ಇಲ್ಲಿ ಗುರುತಿಸಬಹುದು. ಹಾಗೇಯೇ ಮನುಷ್ಯರ ಸ್ವಭಾವವು ಏಕ ರೀತಿಯಾಗಿ ಇರುವುದಿಲ್ಲ. ಅದು ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತದೆ. ಓರ್ವ ಒಳ್ಳೆಯ ಮನುಷ್ಯನಲ್ಲಿ ಇರಬೇಕಾದ ಸ್ವಭಾವಗಳನ್ನು 'ಬದುಕುವ ಮಾತು', 'ಮಾತು ಮಾಣಿಕ್ಯ' ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಈ ಕೃತಿಗಳಲ್ಲಿನ ಪ್ರತಿಯೊಂದು ಲೇಖನವು ಸಹಿತ ಮಾನವನ ಸ್ವಭಾವದ ಚಿತ್ರಣವನ್ನು ಬಿಚ್ಚಿಡುತ್ತವೆ. ಅವರು ಗುರುತಿಸಿದ ಕೆಲವು ಮಾನವೀಯ ಅಂಶಗಳ ಹಿನ್ನೆಲೆಯಲ್ಲಿ ಮಾನವನಲ್ಲಿರಬೇಕಾದ ಉತ್ತಮ ಗುಣ ಸ್ವಭಾವಗಳನ್ನು ಇಲ್ಲಿ ಗುರುತಿಸಲಾಗಿದೆ.

ಮಾನವನಲ್ಲಿರುವ ಸ್ವಭಾವದಿಂದಲೇ ಆತನ ವ್ಯಕ್ತಿತ್ವವನ್ನು ಗುರುತಿಸಲಾಗುತ್ತಿದೆ. ಆತನು ಪ್ರತಿಕ್ರಿಯಿಸುವ ಕ್ರಿಯೆಗಳೇ ಮಾನವನ ಸ್ವಭಾವಗಳಾಗಿರುತ್ತವೆ. ಇಲ್ಲಿ ಮಾನವನು ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೀತಿ ವರ್ತಿಸಬೇಕು ಎಂಬುದನ್ನು ಪಾಟೀಲ ಪುಟ್ಟಪ್ಪ ಅವರು ತಮ್ಮ ಬರವಣಿಗೆಯ ಮೂಲಕ ಹೇಳುತ್ತ ಸಾಗುತ್ತಾರೆ. ಜಗತ್ತಿನಲ್ಲಿ ನಾನಾ ರೀತಿಯ ಸ್ವಭಾವವನ್ನು ಹೊಂದಿರುವ ಅನೇಕ ವ್ಯಕ್ತಿಗಳಿದ್ದಾರೆ. ಅವರ ಸ್ವಭಾವವು ವಿಭಿನ್ನವಾಗಿರುತ್ತದೆ. ಅವುಗಳಿಂದ ಯಾವ ವ್ಯಕ್ತಿಯೂ ಮುಕ್ತನಾಗಿರುವುದಿಲ್ಲ. ಇಂಥ ಮಾನವನ ಮೇಲೆ ಪರಿಸರವು ಪ್ರಭಾವ ಬೀರುತ್ತದೆ ಎಂಬುದನ್ನು ಮನೋವಿಜ್ಞಾನಿಗಳು ಈಗಾಗಲೇ ಹೇಳಿದ್ದಾರೆ. ಆದರೆ ಇಂಥ ಸ್ವಭಾವದ ಕುರಿತಾಗಿ ಪಾಟೀಲ ಪುಟ್ಟಪ್ಪನವರ ವಿಚಾರಗಳನ್ನು ಗಮನಿಸುವುದು ಅಗತ್ಯವಿದೆ.

ಮಾನವ ಎಂದರೆ, ಯಾರು ಎಂಬುದನ್ನು ಸ್ಪಷ್ಟವಾಗಿ ಹೇಳುವುದು ಕಷ್ಟ. ಏಕೆಂದರೆ ಈ ಪರಿಕಲ್ಪನೆಯೇ ಕ್ಲಿಷ್ಟಕರವಾದುದು. ಉಳಿದ ಪ್ರಾಣಿಗಳಿಗಿಂತ ವಿಭಿನ್ನ ಗುಣಲಕ್ಷಣಗಳನ್ನು ಹೊಂದಿದಾತನೆ ಮನುಷ್ಯ, ನಾಗರಿಕತೆಯುಳ್ಳವನೆ ಮಾನವ ಎಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಪಾಟೀಲ ಪುಟ್ಟಪ್ಪನವರು 'ವಿಚಾರ ಇದ್ದವನೆ ಮನುಷ್ಯ. ಒಂದು ವೇಳೆ ವಿಚಾರವಿಲ್ಲದವನು ಕ್ರೂರ ಪ್ರಾಣಿಗಳಿಗಿಂತ ಕಡೆ ಎನಿಸಿಕೊಳ್ಳುತ್ತಾನೆ. ವಿಚಾರ ಇಲ್ಲದವನಲ್ಲಿ ಅಜ್ಞಾನವಿರುತ್ತದೆ. ಅಜ್ಞಾನದೊಂದಿಗೆ ವಿಚಾರ ಎಂದೂ ಕೂಡಿ ಹೋಗುವುದು ಸಾಯವಿಲ್ಲ' ಎಂದು ಹೇಳುವ ಮೂಲಕ ಮಾನವನಿಗೆ ಇರಬಹುದಾದ ವಿಚಾರವಂತಿಕೆಯ ಶಕ್ತಿಯಿಂದಲೇ ಉಳಿದ ಪ್ರಾಣಿಗಳಿಗಿಂತ ಭಿನ್ನವಾದವನು ಎನಿಸಿಕೊಂಡಿರುವನು ಎನ್ನುತ್ತಾರೆ.

ಮಾನವರಲ್ಲಿ ಇರಬೇಕಾದ ಗುಣಗಳನ್ನು ಅವರು ಗುರುತಿಸಿರುವುದನ್ನು ಕಾಣಬಹುದು. ಒಬ್ಬ ಒಳ್ಳೆಯ ಮಾನವನೆನಿಸಿಕೊಂಡವನಲ್ಲಿ ಈ ಗುಣಗಳು ಅವಶ್ಯವಾಗಿ ಇರಬೇಕಾಗುತ್ತದೆ. ಅವುಗಳೆಂದರೆ; ಸೌಜನ್ಯ, ಚಾರಿತ್ರ್ಯ, ನೀತಿ, ಪ್ರೀತಿ, ಮರ್ಯಾದೆ, ಯೋಗ್ಯತೆ, ಕೃತಜ್ಞತೆ, ಮಾತು, ಔದಾರ್ಯ, ಆದರ್ಶ, ವಿವೇಚನೆ, ಆತ್ಮವಿಶ್ವಾಸ, ಧೃಡತೆ, ಮೆಚ್ಚುವ ಗುಣ, ವಿಧೇಯತೆ, ಸಹನೆ, ನಮ್ರತೆ, ಇತಿ–ಮಿತಿ, ಘನತೆ, ತಾಳ್ಮೆ, ಶ್ರದ್ಧೆ, ಗುಣಗಳನ್ನು ಮನುಷ್ಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರಬೇಕು. ಇಲ್ಲದಿದ್ದರೆ ಆತನ ಉತ್ತಮ ಮಾನವ ಎನಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾರೆ. ಪ್ರಸ್ತುತ ದಿನಗಳಲ್ಲಿ ಅವುಗಳ ಕುರಿತಾಗಿ ಒಂದೊಂದಾಗಿ ತಿಳಿಯುವುದು ಆವಶ್ಯಕವಾಗಿದೆ.

**ಸೌಜನ್ಯ :** ಸೌಜನ್ಯ ಎಂದರೆ, ಒಳ್ಳೆಯತನ, ಸಜ್ಜನಿಕೆ ಎಂದರ್ಥ. ಮಾನವನಿಗೆ ಮೊದಲು ಸೌಜನ್ಯವಿರಬೇಕು. ತನ್ನ ನೆರೆ ಹೊರೆಯವರನ್ನು ಪ್ರೀತಿಯಿಂದ ಕಾಣಬೇಕೆಂಬ ಗುಣವಿರಬೇಕು. ಆ ಗುಣವು ನೈಸರ್ಗಿಕವಾಗಿರುವಷ್ಟು ಅದರ ಪರಿಮಳವು ಪರಿಸರವನ್ನೆಲ್ಲ ಹರಡಿ ಪ್ರಸನ್ನಗೊಳಿಸುತ್ತದೆ. ಇವುಗಳಲ್ಲದೆ ಒಣಜಂಬ ಪಟ್ಟರೆ ಜೀವನವೇ ಹುಸಿಯೆನಿಸುತ್ತದೆ. ವ್ಯಕ್ತಿಯು ಜೀವನದಲ್ಲಿ ಮುಂದೆ ಬರಬೇಕಾದರೆ ಸೌಜನ್ಯವು ಮುಖ್ಯವಾಗಿರುತ್ತದೆ. 'ಸೌಜನ್ಯವಾದ ನಡೆಗೆಯಿಂದ ಸಂಸ್ಕೃತಿಗೇನು ನಷ್ಟವಿರುವುದಿಲ್ಲ. ಸೌಜನ್ಯವು ಸಕ್ಕರೆಯಿದ್ದಂತೆ ಸಕ್ಕರೆ ರೋಗದವರನ್ನು ಬಿಟ್ಟು ಎಲ್ಲರನ್ನು ಆಕರ್ಷಿಸುತ್ತದೆ'೧. ವ್ಯಕ್ತಿಗಳಲ್ಲಿ ಇರಬೇಕಾದ ಗುಣಗಳಲ್ಲಿ ಇದು ಒಂದಾಗಿರುತ್ತದೆ. ಸೌಜನ್ಯವಿರುವ ವ್ಯಕ್ತಿಯು ಯಾವಾಗಲು ಒಳಿತಿನೆಡೆಗೆ ಸಾಗುತ್ತಾನೆ.

**ಚಾರಿತ್ರ್ಯ :** ಚಾರಿತ್ರ್ಯ ಎಂದರೆ, ಶೀಲ, ನಡತೆ ಎಂದರ್ಥ. ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಚಾರಿತ್ರ್ಯ. 'ಚಾರಿತ್ರ್ಯ' ಎಂಬುದನ್ನು ಪುಟ್ಟಪ್ಪನವರ ಪ್ರಕಾರ ಮನುಷ್ಯ ತನ್ನನ್ನು ತೋರಿಸುವ ಕನ್ನಡಿ. ಚಾರಿತ್ರ್ಯವು ಅನ್ನ ಮತ್ತು ವಿದ್ಯೆಯಷ್ಟೇ ಮಾನವನಿಗೆ ಅವಶ್ಯವಾದುದು. "ಅನ್ನವಿದ್ದು ಚಾರಿತ್ರ್ಯವಿಲ್ಲದ ವ್ಯಕ್ತಿ ಪಶುವಿನಂತೆ ಜೀವನ ನಡೆಸುತ್ತಾನೆ. ವಿದ್ಯೆಯಿದ್ದು ಚಾರಿತ್ರ್ಯವಿಲ್ಲದ ವ್ಯಕ್ತಿಯೂ ಪ್ರತ್ಯಕ್ಷವಾಗಿ ರಾಕ್ಷಸನೇ ಆಗುತ್ತಾನೆ"೨. ಚಾರಿತ್ರ್ಯವಿದ್ದರಷ್ಟೇ ಸಾಲದು ಮನುಷ್ಯನಿಗೆ ಬೇಕಾಗಿರುವುದು. ಚಾರಿತ್ರ್ಯದ ಜೊತೆಗೆ ಧೈರ್ಯವೂ ಬೇಕಾಗುತ್ತದೆ. ಅದಕ್ಕಾಗಿಯೇ ಅವರು "ನಿಜವಾದ ಚಾರಿತ್ರ್ಯ ಹೊಂದಿದವನು, ತನ್ನ ಅಂತಃಕರಣವನ್ನು ಜಾಗರೂಕವಾಗಿ ಇರಿಸಿಕೊಂಡು ನ್ಯಾಯವಾದ ಕಾರಣಗಳಿಗೋಸುಗ ಧೈರ್ಯದ ಪ್ರತಿಕ್ರಿಯೆ ತೋರಿಸಬೇಕು. ನ್ಯಾಯವಾದ ಪ್ರತಿಕ್ರಿಯೆ ಇಲ್ಲದವನು ಪೂರ್ಣ ಮನುಷ್ಯನೆನಿಸುವುದಿಲ್ಲ"೩ ಎನ್ನುತ್ತಾರೆ.

ಪಾಟೀಲ ಪುಟ್ಟಪ್ಪ ಅವರು ಹೇಳುವಂತೆ 'ಚಾರಿತ್ರ್ಯ ಎನ್ನುವುದು ಮನುಷ್ಯರ ಕೈಯಲ್ಲಿಯೇ ಇರುತ್ತದೆ. ನಿಜವಾದ ಮನುಷ್ಯ ಅವನ ಚಾರಿತ್ರ್ಯದಲ್ಲಿಯೇ ಇರುತ್ತಾನೆ. ಮನುಷ್ಯ ಎನ್ನುವ ಮೂಲವಸ್ತು ಅವನ ಚಾರಿತ್ರ್ಯದಲ್ಲಿಯೇ ಇದೆ. ಚಾರಿತ್ರ್ಯವು ಕನಸು ಕಾಣುವುದರಿಂದ ಬರುವುದಿಲ್ಲ. ಅದು ಅವನ ಜೀವನದ ಹೋರಾಟದಲ್ಲಿ ನಿರ್ಮಾಣಗೊಳ್ಳುತ್ತದೆ. ನಿಜವಾದ ಚಾರಿತ್ರ್ಯ ಉಳ್ಳವನು ಮನೆಯ ಒಳಗೆ, ಹೊರಗೆ ಒಂದೇ ಬಗೆಯಾಗಿ ಇರುತ್ತಾನೆ. ಚಾರಿತ್ರ್ಯಕ್ಕೆ ಇರುವ ಬೇಲೆ ಬೇರಾವುದಕ್ಕೂ ಇರಲಾರದು. ಮನುಷ್ಯ ಏನೇ ಬೋಧಿಸಲಿ, ಏನೇ ಬರೆಯಲಿ, ಏನೇ ರೇಖಿಸಲಿ, ಅವುಗಳ ಹಿಂದೆ ಅವನ ಚಾರಿತ್ರ್ಯ ಇರಬೇಕು. ಚಾರಿತ್ರ್ಯ ಇಲ್ಲದೇ ಹೋದರೆ, ಅವುಗಳಿಗೆ ಒಂದು ಹುಲ್ಲುಕಡ್ಡಿಯ ಬೆಲೆಯೂ ಇಲ್ಲ'೪ ಎನ್ನುವ ಮೂಲಕ ಮನುಷ್ಯನಿಗೆ ಚಾರಿತ್ರ್ಯವೂ ಎಷ್ಟು ಮುಖ್ಯ ಎಂಬುದನ್ನು ಎತ್ತಿ ತೋರಿಸುತ್ತಾರೆ. ಚಾರಿತ್ರ್ಯವು ಸುದೈವಕ್ಕಿಂತಲೂ ಮೇಲು ಎಂಬುದೇ ಅವರ ಅಭಿಪ್ರಾಯವಾಗಿದೆ.

ಚಾರಿತ್ರ್ಯನ್ನುವುದ ವಾಸ್ತವದಲ್ಲಿ ಒಳಗೂ ಹೊರಗೂ ಇರಬೇಕಾದ ಗುಣವಾಗಿರುತ್ತದೆ. ಆದ್ದರಿಂದ 'ಚಾರಿತ್ರ್ಯ ಇರುವ ವ್ಯಕ್ತಿಗೆ ಯಾವುದೇ ರೀತಿಯ ದ್ವಂದಕ್ಕೆ ಅವಕಾಶ ಇರಲಾರದು. ಒಳಗೂ, ಹೊರಗೂ ಒಂದೇ ಆಗಿರುತ್ತಾನೆ. ಮನುಷ್ಯನು ತನ್ನ ಪರಿಣಿತಿಯನ್ನು ಏಕಾಂತದಲ್ಲಿ ಬೆಳೆಸಿಕೊಂಡರೆ; ಚಾರಿತ್ರ್ಯವನ್ನು ಮಾತ್ರ ಲೋಕಾಂತ್ಯದಲ್ಲಿಯೇ ನಿರ್ಮಾಣಗೊಳ್ಳುತ್ತದೆ. ಎಂಥ ಗಾಳಿ ಬೀಸಿದರೂ ಚಾರಿತ್ರ್ಯವುಳ್ಳ ಮನುಷ್ಯನು ತನ್ನ ನೆಲದಿಂದ, ತನ್ನ ನಿಲುಮೆಯಿಂದ ತೂರಿ ಹೋಗುವುದಿಲ್ಲ'೫ ಎನ್ನುವರು.

ಚಾರಿತ್ರ್ಯವನ್ನು ಮನುಷ್ಯ ತನ್ನ ಕೈಯಾರೆ ನಿರ್ಮಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಪುಟ್ಟಪ್ಪನವರು ಇದು "ಸತ್ಯವಂತಿಕೆ, ಪ್ರಾಮಾಣಿಕತೆಯಿಂದ, ಶ್ರದ್ಧೆ, ನಿಷ್ಠೆಗಳಿಂದ, ತ್ಯಾಗ, ಮಾಡಿದ ಸಹಬಾಂಧವರ ಬಗೆಗೆ ಅನಿಸಿಕೆ ಹೊಂದುವುದರಿಂದ ನಿರ್ಮಾಣವಾಗುತ್ತದೆ"೬ ಎನ್ನುತ್ತಾರೆ.

**ಮರ್ಯಾದೆ :** ಮರ್ಯಾದೆ ಎಂಬುದು ವ್ಯಕ್ತಿಯ ವ್ಯಕ್ತಿತ್ವದ ಭೂಷಣ. ಇಂಥ ಮರ್ಯಾದೆಯನ್ನು ಹೊಂದುವ ವ್ಯಕ್ತಿಯು ಕನ್ನೆಯಂತೆ ಪರುಶುದ್ಧವಾಗಿರಿಸಿಕೊಳ್ಳಬೇಕು. ಏಕೆಂದರೆ ಅದೊಂದು ಅನರ್ಘ್ಯವಾದ ರತ್ನವಾಗಿದೆ. ಒಂದು ವೇಳೆ ಮರ್ಯಾದೆ ಹೋಯಿತೆಂದರೆ ಆತನ ಜೀವನವೇ ಹೋದಂತೆ ಎಂದು ತಿಳಿಯಬೇಕು. ಆದರೆ ಅವುಗಳ ಬೆನ್ನು ಹತ್ತಿ ಹೋಗಬಾರದು ಮನುಷ್ಯನ ಬೆನ್ನು ಹತ್ತಿ ಬರಬೇಕು. ಮನುಷ್ಯನಲ್ಲಿ ಏನೇ ಇದ್ದರೂ ಅವನ ಮರ್ಯಾದೆಗೆ ಸಮನಾದುದು ಯಾವುದು ಇಲ್ಲ. ಸಾಮರ್ಥ್ಯ ಬಹಳಷ್ಟು ಇದ್ದರೇನಂತೆ, ಅದು ಮರ್ಯಾದೆಯಿಂದ ಕೂಡಿರದಿದ್ದರೆ ಅದಕ್ಕೆ ಬೆಲೆಯೇ ಇರಲಾರದು೭.

ಪುಟ್ಟಪ್ಪನವರು ತಮ್ಮ ಮತ್ತೊಂದು ಲೇಖನದಲ್ಲಿ ಮರ್ಯಾದೆಗಿಂತ ಮೀಗಿಲಾದುದು ಯಾವುದು ಇಲ್ಲವೆನ್ನುತ್ತಾರೆ. ಇವರ ಪ್ರಕಾರ 'ಮರ್ಯಾದೆಯು ಪ್ರಾಣಕ್ಕಿಂತಲೂ ಮಿಗಿಲಾದುದು. ಇದನ್ನು ಕಳೆದುಕೊಂಡ ಮನುಷ್ಯ ಇದ್ದು ಸತ್ತಂತೆ' ಎನ್ನುತ್ತಾರೆ. ಮರ್ಯಾದೆಯೆನ್ನುವುದು ಮನುಷ್ಯನ ಕಣ್ಣು ಇದ್ದಂತೆ. ಕಣ್ಣಿಗೆ ಬೀಳುವ ಕಸದಿಂದ ಕಣ್ಣಿಗೆ ಗಂಡಾಂತರವಾಗುತ್ತದೆ. ಹಾಗೆಯೇ ಮರ್ಯಾದೆಗೆ ಕಲಂಕ ತಗುಲಿದರೆಅದು ಹಾಳಾಗುತ್ತದೆ. ಹಾಗಾಗಿಯೇ ಅದು ಒಂದು ಅಮೂಲ್ಯ ರತ್ನವಿದ್ದಂತೆ. ಅದಕ್ಕೆ ಪೆಟ್ಟು ಬಿದ್ದು ಮುಕ್ಕಾದರೆ, ಅದರ ಬೆಲೆಯೇ ಕಳೆದುಹೋಗುತ್ತದೆ. ಆದ್ದರಿಂದ ಜೀವನದಲ್ಲಿ ಮರ್ಯಾದೆಯನ್ನು ವ್ಯಕ್ತಿಯು ಕಳೆದುಕೊಳ್ಳಬಾರದು ಎನ್ನುತ್ತಾರೆ. "ಯಾವ ಮನುಷ್ಯನೇ ಇರಲಿ, ಅವನು ತನ್ನ ಮರ್ಯಾದೆಯನ್ನು ಕಾಯ್ದುಕೊಳ್ಳುವುದಕ್ಕೋಸುಗ ತನ್ನ ಸರ್ವಸ್ವವನ್ನೂ ಪಣಕ್ಕೆ ಹಚ್ಚಬೇಕು. ಮರ್ಯಾದೆ ಬರುವ ಕೆಲಸ ಮಾಡಿದರೆ, ಅವಮಾನಕ್ಕೆ ಬದಲಾಗಿ ಮರ್ಯಾದೆಯೇ ಬರುತ್ತದೆ. ಜೀವನದಲ್ಲಿ ತನಗೆ ಬಂದ ಪಾತ್ರವನ್ನು ಮನುಷ್ಯನು ಚೆನ್ನಾಗಿ ನಿರ್ವಹಿಸಿದರೆ, ಅವನಿಗೆ ಮರ್ಯಾದೆ ಅದರಲ್ಲಿಯೇ ಇದೆ"೮ ಎನ್ನುತಾರೆ.

**ಯೋಗ್ಯತೆ :** ಯೋಗ್ಯತೆ ಎಂದರೆ, ಅರ್ಹತೆ, ಸಾಮರ್ಥ್ಯ ಎಂದರ್ಥ. ಯೋಗ್ಯತೆ ಎಂಬುದು ವ್ಯಕ್ತಿಯೂ ಮಾಡುವ ಕೆಲಸದಲ್ಲಿರುತ್ತದೆ. 'ಚಾರಿತ್ರ್ಯದಂತೆ ಯೋಗ್ಯತೆಯು ಒಳ್ಳೆಯ ವಿಚಾರ. ಒಳ್ಳೆಯ ಸಹವಾಸ ಹಾಗೂ ಕೃತಿಗಳು ಮುಖ್ಯವಾಗಿರುತ್ತದೆ. ಯಾರ ಮಾತಿಗೂ ತಲೆಕೆಡಿಸಿಕೊಳ್ಳದೆ ಒಳ್ಳೆಯ ಕಾರ್ಯಗಳನ್ನು ಮಾಡುತ್ತ ಸಾಗುತ್ತಾರೆ. ಕೊನೆಗೆ ಆತನು ಮಾಡುವ ಸತ್ಕಾರ್ಯಗಳು ಲೆಕ್ಕಕ್ಕೆ ಬರುತ್ತವೆಯೆ ಹೊರತು ಅವನು ಕಳೆದ ವರ್ಷಗಳು ಲೆಕ್ಕಕ್ಕೆ ಬರುವುದಿಲ್ಲ'೯ ಎಂಬುದು ಪಾಪು ಅವರ ಅಭಿಪ್ರಾಯ

**ನಂಬಿಕೆ :** ನಂಬಿಕೆ ಎಂದರೆ, ವಿಶ್ವಾಸ, ಶ್ರದ್ಧೆ, ನೆಚ್ಚಿಕೆ ಎಂದು ನಿಘಂಟಿನಲ್ಲಿ ಅರ್ಥ ನೀಡಲಾಗಿದೆ. ಪುಟ್ಟಪ್ಪನವರು ನಂಬಿಕೆಯನ್ನು ವಿಶ್ವಾಸ ಎಂಬರ್ಥದಲ್ಲಿ ಬಳಸುತ್ತಾರೆ. ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ನಂಬಬೇಕಾಗುತ್ತದೆ. ಇಲ್ಲಿ 'ಮನುಷ್ಯರು ಜಗತ್ತನ್ನು ಇನ್ನೊಬ್ಬರ ಕಣ್ಣಿನಿಂದ ನೋಡದೆ, ನಮ್ಮ ಕಣ್ಣಿನಿಂದ ನೋಡಬೇಕಾಗುತ್ತದೆ. ಇನ್ನೊಬ್ಬರ ಕಣ್ಣಿನಿಂದ ನೋಡುವ ಪ್ರಯತ್ನವನ್ನು ಮಾನವರು ಮಾಡುವುದರಿಂದಲೇ ಜೀವನದಲ್ಲಿ ಅಸಮಾನವು ಸೃಷ್ಟಿಯಾಗುತ್ತದೆ'೧೦. ಇನ್ನೊಬ್ಬರ ಅಭಿಪ್ರಾಯಗಳಿಗೆ ಬದ್ಧನಾಗಿರದೆ ಸ್ವಂತ ಅಭಿಪ್ರಾಯಗಳ ಮೇಲೆ ನಂಬಿಕೆಯಿಡಬೇಕಾಗುತ್ತದೆ. ನಂಬಿಗೆ ಇರುವ ಒಬ್ಬ ಮನುಷ್ಯನು ಆಸಕ್ತಿಯಿರುವ ತೊಂಬತ್ತೊಂಬತ್ತು ಜನರಿಗಿಂತಲೂ

ಮಿಗಿಲಾಗಿರುತ್ತಾನೆ. "ಯಾವನನ್ನಾದರೂ ಅಳೆಯುವುದಕ್ಕಿಂತ ಮೊದಲು ಅವನ ನಂಬಿಕೆಗಳು ಏನಿವೆ ಎಂಬುದನ್ನು ಅಳೆಯಬೇಕಾಗುತ್ತದೆ. ಮನುಷ್ಯನ ಸಾಧನೆಸಿದ್ಧಿಗಳ ರಹಸ್ಯಗಳೆಲ್ಲವೂ ಅವನ ನಂಬುಗೆಗಳಲ್ಲಿಯೇ ಇವೆ. ಮನುಷ್ಯ ಏನೋ ಒಂದು ಆಗಿರುತ್ತಾನೆ ಅಥವಾ ಇಲ್ಲ. ಅವನು ಆಗಿರುವುದಕ್ಕೆ ಆಗದೇ ಇರುವುದಕ್ಕೆ ಅವನ ನಂಬುಗೆಗಳೇ ಕಾರಣವಾಗಿವೆ"[೧೧] ಎನ್ನುವ ಮಾತಿನಲ್ಲಿ ಸತ್ಯಾಂಶವಿದೆ. ವ್ಯಕ್ತಿಯು ಜೀವನದಲ್ಲಿ ಇರಿಸಿಕೊಳ್ಳುವ ಒಳ್ಳೆಯ ನಂಬಿಕೆಗಳಿಂದ ಒಳ್ಳೆಯದೇ ಆಗುತ್ತದೆ. ಆದ್ದರಿಂದ ಜೀವನದಲ್ಲಿ ಏನಾದರೂ ಆಗಬೇಕೆನ್ನುವವರು ಮೊದಲು ತಮ್ಮಲ್ಲಿ ನಂಬಿಕೆಗಳನ್ನು ಇರಿಸಿಕೊಳ್ಳಬೇಕಾಗುತ್ತದೆ.

**ಕೃತಜ್ಞತೆ** : ಕೃತಜ್ಞತೆ ಎಂದರೆ, ಮಾಡಿದ ಉಪಕಾರವನ್ನು ನೆನೆಯುವನು ಎಂದರ್ಥ. ಇದೊಂದು ದೊಡ್ಡ ದೈವೀ ಗುಣ. ಮನುಷ್ಯ ಸಹಾಯ ಪಡೆದವನು ಉಪಕಾರ ಗುಣವನ್ನು ಮರೆಯಬಾರದು ಆದರೆ ಉಪಕಾರ ಮಾಡಿದವನು ಅದನ್ನು ನೆನೆಯಬಾರದು. "ಕೃತಜ್ಞತೆಯು ಋಣವಿದ್ದಂತೆ ; ಮನುಷ್ಯನಾದವನು ತನ್ನ ಮೇಲಿರುವ ಭಾರವನ್ನು ಕಡಿಮೆ ಮಾಡಿಕೊಳ್ಳಲೇಬೇಕು. ಅದನ್ನು ಮರೆತವನು ಮನುಷ್ಯನಾಗುವುದಿಲ್ಲ. ಕೃತಜ್ಞತೆ ಇಲ್ಲದಿರುವವನಲ್ಲಿ ಯಾವ ಸದ್ಗುಣಗಳಾಗಿ ಇರುವುದು ಸಾಧ್ಯವಿಲ್ಲ"[೧೨] ಎನ್ನುತ್ತಾರೆ. 'ಕೃತಜ್ಞನಾದ ಮನುಷ್ಯನು ಹೃದಯ ಅಭಾವದಿಂದ ಬಳಲದೇ ಶಬ್ದಗಳ ಅಭಾವದಿಂದ ಬಳಲಬೇಕು. ಕೃತಜ್ಞತೆಯನ್ನು ಎಲ್ಲರೂ ಕೊಂಡಾಡುತ್ತಾರೆ. ಯಾವನಲ್ಲಿ ಕೃತಜ್ಞತೆ ಇರುತ್ತದೆಯೋ ಅದು ಅವನಿಗೆ ಅಲಂಕಾರವೆನಿಸುತ್ತದೆ. ಕೃತಜ್ಞತೆಯು ಶ್ರೀಮಂತರಲ್ಲಿರುವುದಕ್ಕಿಂತ ಬಡವರಲ್ಲಿ ಹೆಚ್ಚಾಗಿರುತ್ತದೆ. ಹಾಗಾಗಿ ನಾವು ನಮ್ಮ ಜೀವನದ ಬಗೆಗೆ, ನಾವು ಪಡೆದಿರುವ ಅವಕಾಶಗಳ ಬಗೆಗೆ, ನಮಗೆ ಸುಖ ನೀಡುತ್ತಿರುವ ಜನರ ಬಗೆಗೆ, ನಮಗೆ ಸ್ನೇಹ ಒದಗಿಸಿರುವ ಜನರ ಬಗೆಗೆ, ನಮ್ಮನ್ನು ಮೆಚ್ಚುತ್ತಿರುವ ಜನರ ಬಗೆಗೆ, ಕೃತಜ್ಞರಾಗಿರಬೇಕಾಗುತ್ತದೆ. ಯಾರಿಂದಲಾದರೂ ಒಂದು ಸಣ್ಣ ಉಪಕಾರವನ್ನು ಪಡೆದಿದ್ದರೂ ಅವರನ್ನು ನಾಲಿಗೆಯ ತುದಿಯಿಂದ ಸ್ಮರಿಸದೆ ಹೃದಯಾಂತರಾಳದಿಂದ ಸ್ಮರಿಸಬೇಕಾಗುತ್ತದೆ. ನಾವು ಅದನ್ನು ನೆನೆದರೆ, ಮನಷ್ಯರಲ್ಲಿ ಮನುಷ್ಯರೆನಿಸಿಕೊಳ್ಳುತ್ತವೆ. ಇಲ್ಲದೇ ಹೋದರೆ ಅದೊಂದು ಜೀವನದ ದೊಡ್ಡ ಕೊರತೆಯಾಗಿ ಕಾಣುತ್ತದೆ[೧೩] ಎನ್ನುತ್ತಾರೆ.

**ಮಾತು** : ಮಾತನ್ನು ಜ್ಯೋತಿರ್ಲಿಂಗ, ಮಾತು ಮಾಣಿಕ್ಯ ಎಂದು ನಮ್ಮ ಪೂರ್ವಜರು, ಜ್ಞಾನಿಗಳು ಹೇಳುತಾರೆ. ಜನಪದರು ಮಾತು ಆಡಿದರೆ ಹೋತು: ಮುತ್ತು ಒಡೆದರೆ ಹೋತು ಎಂದಿದ್ದಾರೆ. ಆದ್ದರಿಂದ ನಾವು ಆಡುವ ಪ್ರತಿಯೊಂದು ಮಾತುಗಳು ಹಿತನುಡಿಗಳಂತಿರಬೇಕು. ಒಂದುವೇಳೆ ಮಾತುಗಳು ಅಹಿತಕರವಾಗಿದ್ದರೆ ಅದರಿಂದ ಅಪಾಯವೇ ಹೆಚ್ಚು. ಪಾಪು ಅವರು ಈ ಮಾತಿನ ಕುರಿತು ಹೇಳುತ್ತ 'ಬದುಕಿನಲ್ಲಿ ಅತ್ಯಂತ ಕಷ್ಟದ ಕೆಲಸವೆಂದರೆ ವಿಚಾರ ಮಾಡಿ ಹೇಳುವುದೊಂದನ್ನು ಬಿಟ್ಟರೆ ಬೇರೆ ಇನ್ನೊಂದಿಲ್ಲ. ಅನೇಕರು ಕೇವಲ ಮಾತನಾಡುವುದನ್ನೇ ರೂಢಿಸಿಕೊಂಡಿರುತ್ತಾರೆ. ಆಡುವ ಮಾತಿನಲ್ಲಿ ಯಾವುದೇ ಹುರುಳು ಇರುವುದಿಲ್ಲ. ಹಾಗಾಗಿ ಆಡುವ ಮಾತುಗಳು ಹುರುಳಿನಿಂದ ಕೂಡಿರಬೇಕು'[೧೪] ಎನ್ನುತ್ತಾರೆ. 'ಒಂದು ವೇಳೆ ಮಾತು ಕೊಟ್ಟು ಅದನ್ನು ಕೆಲವು ಸಂದರ್ಭಗಳಲ್ಲಿ ಮುರಿಯುವ ವ್ಯಕ್ತಿಯು ಕೊಟ್ಟ ಮಾತು, ವಚನಗಳಿಗೆ ಬದ್ಧನಾಗಿರದೆ ಮಾತಿನಲ್ಲಿ ಮಾತಿಲ್ಲದವನಾದರೆ ಆತನು ಮನುಷ್ಯನೇ ಅಲ್ಲ'[೧೫] ಎಂಬುದಾಗಿ ಹೇಳುತ್ತಾರೆ.

ಮನುಷ್ಯನ ಬೆಳವಣಿಗೆಯನ್ನು ಗುರುತಿಸುವುದು ಆತ ಆಡುವ ಮಾತು. ಮಾತು ವ್ಯಕ್ತಿಯ ನಡೆ ನುಡಿಗಳನ್ನು ತೋರಿಸಿಕೊಡುತ್ತದೆ. 'ಒಳ್ಳೆ ರೀತಿಯಿಂದ ಬೆಳೆದ ಮನುಷ್ಯನು ಎಂದಿಗೂ ಇನ್ನೊಬ್ಬರನ್ನು ತುಳಿಯಲು ಬಯಸುವುದಿಲ್ಲ. ಉತ್ತಮವಾದ ಮಾತು ಅವನಿಗೆ ದಾರಿ ಮಾಡಿಕೊಡುತ್ತದೆಯೇ ಹೊರತು; ದಾರಿಯನ್ನೇ ಕಡಿದು ಹಾಕುವುದಿಲ್ಲ. ಮತ್ತೊಬ್ಬರ ಬೆಳವಣಿಗೆಯನ್ನು ಕಂಡು ಅಸೂಹೆ ಪಡುವುದಿಲ್ಲ. ಏಳ್ಗೆಯನ್ನು ಕಂಡು ಕರಗುವುದೂ ಇಲ್ಲ. ಏನಾದರೂ ಆತನು ಒಳ್ಳೆಯವನೇ ಆಗಿರುತ್ತಾನೆ'[೧೬]. ಆದರೆ ಒಳ್ಳೆಯ ಮಾತುಗಳು ಇಲ್ಲದೇ ಹೋದರೆ ವ್ಯಕ್ತಿಯ ಜ್ಞಾನ, ಬುದ್ಧಿಮತ್ತೆ, ಶೌರ್ಯ, ವಾಗ್ವೈಖರಿಗಳಿಗೆ ಯಾವುದೇ ಬೆಲೆಯೂ ಇರುವುದಿಲ್ಲ. ಹಾಗಾಗಿ ಒಳ್ಳೆಯದನ್ನು ಮಾಡಬೇಕೆಂದು ಯೋಚಿಸುವ ಮನುಷ್ಯನು ಮೊದಲು ತನ್ನ ಸುತ್ತಮುತ್ತಲಿನ ಜನರೊಂದಿಗೆ ಒಳ್ಳೆಯ ರೀತಿಯಲ್ಲಿ ಮಾತನಾಡುವುದನ್ನು ಕಲಿಯಬೇಕೆಂದು ಹೇಳುತ್ತಾರೆ[೧೭]. ಇದಲ್ಲವೂ ರೂಢಿಯಾಗುವುದು ಮನೆಯ ಪರಿಸರದಿಂದಲೇ ಎಂಬುದನ್ನು ಮರೆಯುವಂತಿಲ್ಲ. ಹೆತ್ತವರು ಬಾಲ್ಯದಲ್ಲಿಯೇ ಮಕ್ಕಳಿಗೆ ಒಳ್ಳೆಯ ರೀತಿಯಾಗಿ ಮಾತನಾಡುವುದನ್ನು ಕಲಿಸಬೇಕಾಗುತ್ತದೆ.

**ಔದಾರ್ಯ** : 'ಔದಾರ್ಯ' ಎಂಬುದು ಉದಾರತೆಯನ್ನು ತಿಳಿಸುತ್ತದೆ. ಮಾನವರಿಗೆ ಇರಬೇಕಾಗದ ಮುಖ್ಯ ಗುಣಗಳಲ್ಲಿ ಔದಾರ್ಯವು ಒಂದಾಗಿದೆ. ಮನುಷ್ಯರು ನಮ್ಮಿಂದ ಬಯಸುವುದು ಉದಾರತೆಯನ್ನೇ ಹೊರತು ಹಣ ಆಸ್ತಿಗಳನ್ನಲ್ಲ. ಸೌಜನ್ಯಯತೆಯಿಂದ ವರ್ತಿಸುವ ಗುಣವನ್ನು ಮೆಚ್ಚುತ್ತಾರೆ. ಕೊಡುವ ವಸ್ತುವು ಸಣ್ಣದಿರಬಹುದು. ಆದರೆ ಕೊಡುವ ಮನಸ್ಸು ದೊಡ್ಡದಾಗಿರಬೇಕು. ಅದರಂತೆಯೇ ಬೇರೆಯವರಿಗೆ ಕೊಡುವ ಔದಾರ್ಯದ ಗುಣಗಳನ್ನು ಪುಟ್ಟಪ್ಪನವರು ಹೀಗೆ ಗುರುತಿಸುತ್ತಾರೆ. "ನಾವು ವೈರಿಗೆ ಕ್ಷಮೆಯನ್ನೂ, ವಿರೋಧಿಗೆ ಸಹನೆಯನ್ನು ಕೊಡಬೇಕು. ಸ್ನೇಹಿತನಿಗೆ ನಮ್ಮ ಹೃದಯವನ್ನೇ ನೀಡಬೇಕು. ಮಗುವಿಗೆ ನಾವು ಒಳ್ಳೆಯ ಉದಾಹರಣೆ ಹಾಕಿ ಕೊಡಬೇಕು. ತಂದೆಗೆ ಗೌರವವನ್ನು ಕೊಡುವಂತೆ, ತಾಯಿಗೆ, ನಮ್ಮ ಬಗೆಗೆ ಹೆಮ್ಮೆಪಡುವ ವರ್ತನೆ ನಮ್ಮಲ್ಲಿ ಇದೆ ಎನ್ನುವುದನ್ನು ತೋರಿಸಿಕೊಡಬೇಕು. ನಮ್ಮ ಮರ್ಯಾದೆ ಇರಿಸಿಕೊಂಡೇ ಬೇರೆಯವರಿಗೆ ಮರ್ಯಾದೆಯನ್ನು ನೀಡಬೇಕು"[೧೮] ಎನ್ನುತ್ತಾರೆ. ಕೊಡುವ ಕಾಣಿಕೆಯು ಸಣ್ಣದೊ ದೊಡ್ಡದೊ ಮುಖ್ಯವಲ್ಲ. ಅದನ್ನು ಕೊಡುವವರಲ್ಲಿರು ಪ್ರೀತಿ ಮುಖ್ಯವಾಗಿರುತ್ತದೆ. ಮನಸ್ಪೂರ್ತಿಯಾಗಿ ಔದಾರ್ಯದ ಮನೋಭಾವದಿಂದ ನೀಡಿದರೆ ಆತನೇ ದೊಡ್ಡವನಾಗಿರುತ್ತಾನೆ. ಅದೇ ಔದಾರ್ಯ ಗುಣವಿರದೆ ಗರ್ವದಿಂದ ನೀಡಿದರೆ ಅವನು ಎಷ್ಟೇ ದೊಡ್ಡವನಾಗಿದ್ದರೂ ಸಣ್ಣವನಾಗಿರುತ್ತಾನೆ ಎಂದಿರುವ ಮಾತು ಔಚಿತ್ಯ ಪೂರ್ಣವಾಗಿದೆ. ಪುಟ್ಟಪ್ಪನವರು "ಯಾವನು ಕೊಡುವನೋ, ಅವನ ಔದಾರ್ಯವೆಂದೂ ಬಡತನವನ್ನು ತಂದುಕೊಳ್ಳುವುದಿಲ್ಲ. ಕೊಡುವ ಜನರ ಔದಾರ್ಯವನ್ನು, ಈ ಔದಾರ್ಯ ಇನ್ನೂ ಹೆಚ್ಚು ಶ್ರೀಮಂತಗೊಳಿಸಿದೆ"[೧೯] ಎನ್ನುತ್ತಾರೆ. ಹಾಗಾಗಿ ಮನುಷ್ಯರಾದ ನಾವುಗಳು ಯಾವುದನ್ನಾದರೂ ಕೊಡುವಾಗ ಪ್ರೀತಿಂದಲೇ ಕೊಡಬೇಕಾಗುತ್ತದೆ. ಅಲ್ಲದೆ ಪ್ರತಿಯೊಬ್ಬರು ಜೀವನದಲ್ಲಿ ಔದಾರ್ಯ ಗುಣವನ್ನು ಅಳವಡಿಸಿಕೊಳ್ಳುವುದು ಮುಖ್ಯ ಎಂಬುದು ಪುಟ್ಟಪ್ಪನವರ ಅಭಿಪ್ರಾಯವಾಗಿದೆ.

**ಆದರ್ಶ** : ಆದರ್ಶವೆಂಬುದು ವ್ಯಕ್ತಿಯ ವೈಯಕ್ತಿಕ ಬದುಕಿಗೆ ಸಂಬಂಧಿಸಿದ್ದರು ಸಹಿತ ಇದು ಪ್ರತಿಯೋರ್ವ ವ್ಯಕ್ತಿಗೂ ಆವಶ್ಯಕವಾಗಿ ಬೇಕಾಗುತ್ತದೆ. "ಈ ಆದರ್ಶಗಳು ನಿರರ್ಥಕವೂ ನಿರುಪಯೋಗಿಯೂ ಅಲ್ಲ. ಅವು ಮನುಷ್ಯನ ಕಾಲಿಗೆ ಜಿಗಿತ ಕೊಟ್ಟು, ಅವನನ್ನು ಮುಂದಕ್ಕೆ ಓಡಿಸುವ ಜಿಗಿತದ ಹಲಗೆಗಳೆನಿಸಿವೆ.

ಮನುಷ್ಯನ ನಿಜವಾದ ಶಕ್ತಿ ಈ ಹಲಗೆಗಳ ಮೂಲಕವೇ ಬರುತ್ತದೆ”೨೦. ಆದರ್ಶಯುತವಾದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಜೀವನದ ಸಾರ್ಥಕತೆಯನ್ನು ಪಡೆಯಲು ಸಾಧ್ಯವಾಗುತ್ತದೆ.

**ವಿವೇಚನೆ :** ವಿವೇಕ ಎಂದರೆ ತಿಳುವಳಿಕೆ, ವ್ಯವಹಾರ ಜ್ಞಾನ ಎಂದರ್ಥ. ವಿವೇಕ ಎಂಬುದು ಜಾಗೃತವಾದುದು. ‘ಮನುಷ್ಯ ವಿವೇಕವನ್ನು ಕಳೆದುಕೊಂಡು ಬದುಕಬಾರದು ಬದುಕಿನಲ್ಲಿ ಒಂದು ಅಳೆಯುವ ವಸ್ತುವಿಲ್ಲವೆಂದು ಬದುಕಿದವರಿದ್ದಾರೆ. ಆದರೆ ವಿವೇಕ ಕಳೆದುಕೊಂಡು ಬದುಕಿದವರಿಲ್ಲ’೨೧ ಎನ್ನುತ್ತಾರೆ. ವಿವೇಕವುಳ್ಳ ಮನುಷ್ಯನು ತನ್ನ ಕೆಲಸವನ್ನು ಬೇರೆಯವರಿಗೆ ವಹಿಸಿಕೊಡುವುದಿಲ್ಲ; ಕೊಡಲೂ ಬಾರದು ಎಂಬುದು ಪಾಪು ಅವರ ಅಭಿಪ್ರಾಯವಾಗಿದೆ. ಇಂಥ ವಿವೇಕದಿಂದ ಮನುಷ್ಯನು ಉಳಿದವರಿಗಿಂತ ಭಿನ್ನನಾಗಿ ನಿಲ್ಲುತ್ತಾನೆ. ತರ್ಕ ಮತ್ತು ವಿವೇಕದಲ್ಲಿ ವಿವೇಕವೆ ಮುಖ್ಯವೆನಿಸುತ್ತದೆ. ‘ಒಮ್ಮೊಮ್ಮೆ ತರ್ಕವು ಮನುಷ್ಯರನ್ನು ತಪ್ಪುದಾರಿಗೆ ಕರೆದುಕೊಂಡು ಹೋಗಬಹುದು. ಆದರೆ ವಿವೇಕವು ಎಂದೂ ಮಾನವರನ್ನು ತಪ್ಪುದಾರಿಗೆ ಕೊಂಡ್ಯೊಯ್ಯುವುದಿಲ್ಲ. ವಿವೇಕವುಳ್ಳ ವ್ಯಕ್ತಿಯೂ ಎಂಥ ಬಲಾಢ್ಯ ವ್ಯಕ್ತಿಯೊಂದಿಗಾದರೂ ಸೆಣಸಿ ಗೆಲ್ಲುತ್ತಾನೆ. ಎಂದಿಗೂ ಮನಶ್ಶಾಂತಿ ಕಳೆದುಕೊಳ್ಳುವುದಿಲ್ಲ. . . ವಿವೇಕವು ತರ್ಕಕ್ಕಿಂತ, ಶಕ್ತಿಗಿಂತ, ಬುದ್ಧಿಗಿಂತ ಹೆಚ್ಚಿನದು’೨೨ ಎಂದಿದ್ದಾರೆ. ಆದರೆ ಜಗತ್ತಿನಲ್ಲಿ ಜನರು ಮಾತ್ರ ಭಾವೋದ್ವೇಗಗಳ ಮೇಲೆಯೇ ಬದುಕಿದ್ದಾರೆ ಹೊರತು ವಿವೇಚನೆಗಳ ಮೇಲೆ ಬದುಕಿಲ್ಲ. ವಿಚಾರವಂತಿಕೆಗಾಗಲಿ, ವಿವೇಚನೆಗಳಿಗಾಗಲಿ ತಮ್ಮ ಜೀವನದಲ್ಲಿ ಅವಕಾಶಗಳನ್ನು ಒದಗಿಸಿಕೊಡದ ಜನರು ಗಲ್ಲುಗಂಬಕ್ಕೆ ಏರುವ ವ್ಯಕ್ತಿಯ ಸ್ಥಿತಿಯಲ್ಲಿರುತ್ತಾರೆ. ಇವರಿಂದ ಮಾನವಕುಲಕ್ಕಾಗಲಿ, ಸಮಾಜಕ್ಕಾಗಲಿ ಯಾವುದೇ ರೀತಿಯ ಉಪಕಾರವೂ ಆಗುವುದಿಲ್ಲ. ಅದನ್ನೇ ಪಾಪು ಅವರು ತಮ್ಮ ಮಾತಿನ ಶೈಲಿಯಲ್ಲಿಯೇ ಬಿಂಬಿಸುತ್ತಾರೆ. “ಇಂದು ಜಗತ್ತಿನಲ್ಲಿ ಆಗಿರುವುದೆಲ್ಲವೂ ವಿವೇಚನೆಯಿಂದಲೇ ಆಗಿದೆ. ಮನುಷ್ಯನ ನೀತಿ, ಪ್ರತಿಭೆ, ವಿನೋದ, ಪರಿಣಿತಿ ಹಾಗೂ ಅಭಿರುಚಿ ಎಲ್ಲವೂಗಳಿಗೂ ಮೂಲದಲ್ಲಿ ವಿವೇಚನೆ ಇದೆ. ಮನುಷ್ಯನಿಗೆ ಘನತೆಯಾಗಲಿ, ಉದಾತ್ತತೆಯಾಗಲಿ, ವಿವೇಚನೆಯಿಂದಲೇ ಬರುತ್ತದೆ. ವಿವೇಚನೆ ಮಾಡದೇ ಇದ್ದವನು ಇನ್ನೇನು ಆಗುತ್ತಾನೆ. ಮನುಷ್ಯನಂತೂ ಖಂಡಿತವಾಗಿ ಆಗುವುದಿಲ್ಲ”೨೩ ಎನ್ನುವ ಮೂಲಕ ವಿವೇಚನೆಯನ್ನು ಜಾಗೃತವಾಗಿರಿಸಿಕೊಳ್ಳಬೇಕು ಎಂಬುದಾಗಿ ಸೂಚಿಸುತ್ತಾರೆ.

ವಿವೇಕ ಇರುವಲ್ಲಿ ಸದ್ಗುಣ, ಸದಭಿರುಚಿ, ಪ್ರತಿಭೆ, ಪರಿಣಿತಿ, ವಿನೋದ, ಸ್ನೇಹ ಮೊದಲಾದ ಮೌಲಿಕ ಅಂಶಗಳು ಇರುತ್ತವೆ೨೪. ಇದು ಜೀವನದ ಮಾರ್ಗದರ್ಶಿಯೂ ಆಗುತ್ತದೆ. ಆದ್ದರಿಂದ ಮನುಷ್ಯನು ತನ್ನ ಬದುಕಿನಲ್ಲಿ ವಿವೇಕವನ್ನು ಜತನದಿಂದ ಕಾಯ್ದುಕೊಂಡು ಹೋಗಬೇಕಾಗುತ್ತದೆ. ಹಾಗಾಗಿ ನಾವು ಎಂಥ ಕಷ್ಟ, ಸಂಕಷ್ಟದ ಪರಿಸ್ಥಿತಿಯಲ್ಲಿಯೂ ಸಹಿತ ತನ್ನ ವಿವೇಕವನ್ನು ಕಳೆದುಕೊಳ್ಳಬಾರದು ಎಂಬುದೇ ಅವರ ಆಶಯವಾಗಿದೆ.

**ಆತ್ಮವಿಶ್ವಾಸ :** ಆತ್ಮವಿಶ್ವಾಸ ಎಂದರೆ, ತನ್ನಲ್ಲಿ ತನಗೆ ಇರುವ ನಂಬಿಕೆಯೇ ಆಗಿದೆ. ಮಾನವರು ಸಂಪಾದಿಸಬೇಕಾದ ಸದ್ಗುಣಗಳಲ್ಲಿ ಆತ್ಮವಿಶ್ವಾಸವು ಒಂದು. ಇದು ಮನುಷ್ಯನ ಅಭಿವೃದ್ಧಿಯಲ್ಲಿ ಮತ್ತು ಸಾಧನೆಯಲ್ಲಿ ಬಹು ಮುಖ್ಯವಾದ ಗುಣವೂ ಆಗಿರುತ್ತದೆ. ಆತ್ಮವಿಶ್ವಾಸವುಳ್ಳವರು ತಮ್ಮಲ್ಲಿ ಧೈರ್ಯವನ್ನೂ, ಶ್ರದ್ಧೆಯನ್ನೂ ಕೆಲಸ ಸಾಧಿಸುವ ನಿರಂತರ ಪ್ರವೃತ್ತಿಯನ್ನೂ ಇರಿಸಿಕೊಂಡಿರಬೇಕಾಗುತ್ತದೆ. ಇದು ಇಲ್ಲದೆ ಹೋದರೆ ತಾನು ಕೈಗೊಳ್ಳುವ ಕೆಲಸದಲ್ಲಿ ಸೋಲನ್ನು ಅನುಭವಿಸಬೇಕಾಗುತ್ತದೆ. ಅದಕ್ಕಾಗಿ ಮಾನವನು ಮೊದಲು ತನ್ನಲ್ಲಿ ಆತ್ಮವಿಶ್ವಾಸವನ್ನು ಹೊಂದಬೇಕಾಗುತ್ತದೆ. ಇದು ವ್ಯಕ್ತಿಯಲ್ಲಿ ಮೊದಮೊದಲು ಇಲ್ಲದಿರುವ ಸಾಮರ್ಥ್ಯವನ್ನು ಸಹಿತ ತಂದುಕೊಡುತ್ತದೆ. ಪುಟ್ಟಪ್ಪನವರು “ತನ್ನ ಸಾಮರ್ಥ್ಯದಲ್ಲಿ ನಂಬುಗೆ ಕಳೆದುಕೊಂಡ ಮನುಷ್ಯನು ಜೀವನದಲ್ಲಿ ನಷ್ಟವನ್ನೇ ಕಾಣುತ್ತಾನೆ. ಮನುಷ್ಯನು ತನ್ನ ಬಗೆಗೆ ವಿಶ್ವಾಸ ಕಳೆದುಕೊಳ್ಳುವುದೂ ಒಂದೇ, ವಿಷ ಸೇವನೆ ಮಾಡುವುದು ಒಂದೇ. ಮನುಷ್ಯ ಬದುಕಬೇಕು, ಗೆಲ್ಲಬೇಕು ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಅಚಲವಾದ ಆತ್ಮವಿಶ್ವಾಸವು, ಮನುಷ್ಯನಿಗೆ, ಅವನಲ್ಲಿ ಇಲ್ಲದಿರದ ಸಾಮರ್ಥ್ಯಗಳನ್ನು ಕೂಡ ತಂದುಕೊಡುತ್ತದೆ”೨೫ ಎನ್ನುವ ಮೂಲಕ ಮಾನವನು ರೂಢಿಸಿಕೊಳ್ಳಬೇಕಾದ ಈ ಸದ್ಗುಣವನ್ನು ಕುರಿತು ಉಲ್ಲೇಖಿಸುತ್ತಾರೆ.

ಆತ್ಮವಿಶ್ವಾಸ ಇಲ್ಲದೆ ಹೋದರೆ ಮನುಷ್ಯನು ಅನೇಕ ಸಾಮರ್ಥ್ಯಗಳನ್ನು ಹೊಂದಿದ್ದರೂ ಸಹಿತ ಅವನು ನಿಷ್ಪ್ರಯೋಜಕನೆನಿಸುತ್ತಾನೆ. ತನ್ನನ್ನೇ ತಾನು ಕಳೆದುಕೊಳ್ಳುತ್ತಾನೆ. ಆದರೆ ಆತನು ಆತ್ಮವಿಶ್ವಾಸಕ್ಕೆ ಅಂಟಿಕೊಂಡಿರಬೇಕಾಗುತ್ತದೆ. ಆತ್ಮವಿಶ್ವಾಸವಿರುವುವರು ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಹಿತ ಅವರು ಅಳುಕದೇ ಮುಂದೆ ಸಾಗುತ್ತಾರೆ. ಇದರ ಕುರಿತು ಪುಟ್ಟಪ್ಪನವರು ಹೀಗೆ ಹೇಳುತ್ತಾರೆ. “ಅತ್ಮವಿಶ್ವಾಸವು ಮನುಷ್ಯನ ಅನೇಕ ಕೊರತೆಗಳನ್ನು ತುಂಬಿಕೊಡುತ್ತದೆ. ಎಲ್ಲವೂ ಇದ್ದು ಆತ್ಮವಿಶ್ವಾಸ ಇಲ್ಲದಿದ್ದರೆ ಮನುಷ್ಯನಲ್ಲಿ ಎಲ್ಲವೂ ಇದ್ದಂತೆ ಅಲ್ಲ. ಆತ್ಮವಿಶ್ವಾಸವಿದ್ದು ಬೇರೆ ಇನ್ನೇನು ಇಲ್ಲದಿದ್ದರೆ ಮನುಷ್ಯನಲ್ಲಿ ಎಲ್ಲವೂ ಇದ್ದಂತೆ. ಆತ್ಮವಿಶ್ವಾಸವು ಮನುಷ್ಯನಿಗೆ ಹೊಸತನವನ್ನು ತಂದುಕೊಡುತ್ತದೆ. ಅವನನ್ನು ಹೊಸ ಮನುಷ್ಯನನ್ನಾಗಿ ಮಾಡುತ್ತದೆ. ಅವನಲ್ಲಿ ಇಲ್ಲದಿರುವ ಸಾಮರ್ಥ್ಯಗಳನ್ನು ಈ ಆತ್ಮವಿಶ್ವಾಸ ಅವನಲ್ಲಿ ತುಂಬಿಕೊಡುತ್ತದೆ. ಆತ್ಮವಿಶ್ವಾಸ ಇದ್ದವನಿಗೆ ಸೋಲೆನ್ನುವುದೇ ಇಲ್ಲ”೨೬ ಎನ್ನುತ್ತಾರೆ.

ಆತ್ಮ ವಿಶ್ವಾಸವು ಮನುಷ್ಯನನ್ನು ಮುಂದಕ್ಕೆ ಕರೆದುಕೊಂಡು ಹೋಗುತ್ತದೆ. ಹಾಗಾಗಿ ನಾವು ಏನನ್ನೂ ಕಳೆದುಕೊಂಡರೂ ಆತ್ಮವಿಶ್ವಾಸವನ್ನು ಮಾತ್ರ ಕಳೆದುಕೊಳ್ಳಬಾರದು. ‘ಆತ್ಮವಿಶ್ವಾಸವಿರುವ ಮನುಷ್ಯನು ತನ್ನ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾನೆ. ಅವನಲ್ಲಿ ಧೈರ್ಯ ಜಿಗುಟುತನ ಇರುವುದರಿಂದ ಅವನು ಶೌರ್ಯದ ಕಾರ್ಯಗಳಿಗೆ ಕೈ ಹಾಕುತ್ತಾನೆ. ಆನರು ಮುಂದಾಳುಗಳಾಗಿ ಪ್ರಕಟಗೊಳ್ಳುತ್ತಾರೆ’೨೭. ಎಂಥ ಪರಿಸ್ಥಿಯಲ್ಲಿಯೂ ತನ್ನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳಬಾರದು. ಅಲ್ಲದೆ ಆತ್ಮವಿಶ್ವಾಸವನ್ನು ಕುಂದಿಸಿಕೊಳ್ಳಬಾರದು.

**ಆತ್ಮಪರೀಕ್ಷೆ :** ಆತ್ಮಪರೀಕ್ಷೆ ಎಂಬುದು ಸ್ವ–ವಿಮರ್ಶೆ ಎಂದರ್ಥ. ವ್ಯಕ್ತಿಯು ತಾನು ಮಾಡಿದ ಕಾರ್ಯಗಳ ಪುನರಾವಲೋಕನವನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ತಾನೇ ಪರಕೀಯನೆಂಬಂತೆ ತಿಳಿದು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಬೇಕಾಗುತ್ತದೆ. ಯಾವ ವ್ಯಕ್ತಿಯು ತನ್ನ ತಪ್ಪನ್ನಾಗಲಿ, ದೋಷಗಳನ್ನಾಗಲಿ ಪರೀಕ್ಷಿಸಿಕೊಂಡಾಗ ಅವುಗಳು ತಪ್ಪೆಂದು ತಿಳಿದು ಬಂದಾಗ ತನ್ನನ್ನು ತಾನೇ ತಿದ್ದಿಕೊಳ್ಳಬೇಕು. ಒಂದು ವೇಳೆ ಅದು ತಪ್ಪಿಲ್ಲವೆಂದು ಕಂಡುಬಂದರೆ ಅದೇ ಹಾದಿಯಲ್ಲಿ ನಡೆಯಬೇಕು. ಇದರಿಂದ ಒಲ್ಲೇಯ ಜ್ಞಾ ಹೊಂದಿದವೆಂದು ತಿಳಿಯಬೇಕು. ಅದಕ್ಕಾಗಿ ಪಾಪು ಅವರು ಒಂದು ಸಲಹೆಯನ್ನು ನೀಡುತ್ತಾರೆ. “ಮನುಷ್ಯನು ತನ್ನ ಕೆಲಸ ಮುಗಿಸಿ, ರಾತ್ರಿ ಮಲಗುವುದಕ್ಕೆ ಸಿದ್ಧನಾಗುವ ಮೊದಲು ತಾನು ದಿನದಲ್ಲಿ ಮಾಡಿದ ಕೆಲಸದ ಅಭಾವ ಪತ್ರವನ್ನು ಮೂರು ಸಲ ಪರೀಕ್ಷಿಸಿ ತನ್ನಿಂದ ದೋಷ ಯಾವುದು ಆಗಿಲ್ಲವೆನ್ನುವುದನ್ನು ಭರವಸೆ ಮಾಡಿಕೊಳ್ಳಬೇಕು.”೨೮ ಎನ್ನುತ್ತಾರೆ. ಆತ್ಮ ಪರೀಕ್ಷೆಯನ್ನು

ಮಾಡಿಕೊಳ್ಳುವುದರಿಂದ ತನ್ನ ಊನಗಳನ್ನು ಕಳೆದುಕೊಂಡು ಶ್ರೇಷ್ಠತೆಯನ್ನು ತಂದುಕೊಡುತ್ತಾನೆ ಎನ್ನುವ ಮೂಲಕ ಮಾನವನಿಗೆ ಆತ್ಮಾವಲೋಕನ ಮುಖ್ಯವಾದುದು ಎನ್ನುತ್ತಾರೆ.

ಪ್ರತಿ ನಿತ್ಯವು ಮನುಷ್ಯನು ತಾನು ಮಾಡುವ ಕೆಲಸದ ಕುರಿತಾಗಿ ಆತ್ಮವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ 'ಜಗತ್ತು ಈಗ ಇರುವಂತೆ ಇರದೆ, ಸ್ನೇಹ ಸೋದರತೆಗಳಿಂದ ಕೂಡಿಕೊಂಡು ಸಹ್ಯವೂ ಸುಂದರವು ಆಗಿರುತ್ತದೆ. ಮನುಷ್ಯ ಸುಧಾರಿಸುವವನಾದರೆ ಜಗತ್ತಿನಲ್ಲಿ ಸುಧಾರಿಸುವುದೇನೂ ಇರುವುದಿಲ್ಲ. ಸ್ವರ್ಗವೆಂದರೆ ಬೇರೆ ಇನ್ನೇನೂ ಅಲ್ಲ, ಸುಧಾರಿಸಿದ ಜನರಿರುವ ಸಮಾಜವೇ ಸ್ವರ್ಗ'[೨೯] ಎನ್ನುತ್ತಾರೆ. ಇದರಿಂದ ಸಮಾಜದಲ್ಲಿ ಗೌರವಯುತವಾಗಿ ಬೆಳೆಯಲು ಕಾರಣವಾಗುತ್ತದೆ. ಆತ್ಮಾವಲೋಕನ ಎಂಬುದು ವ್ಯಕ್ತಿಯು ತನ್ನನ್ನು ತಾನು ತಿದ್ದಿಕೊಳ್ಳಲು ಇರುವ ಉತ್ತಮ ಮಾರ್ಗವೇ ಆಗಿದೆ.

**ದೃಢತೆ :** ದೃಢತೆ ಮಾನವರಲ್ಲಿ ಇರಬೇಕಾದ ಮತ್ತೊಂದು ಗುಣ. ದೃಢತೆ ಎಂಬುದಕ್ಕೆ ಕನ್ನಡ ನಿಘಂಟಿನಲ್ಲಿ 'ಗಟ್ಟಿಯಾದುದು', 'ಬಲವಾದುದು', 'ಸ್ಥಿರತೆ', 'ಕಠಿಣವಾದುದು', 'ದಿಟವಾದುದು' ಎಂಬ ಇತ್ಯಾದಿ ಅರ್ಥಗಳನ್ನು ಕೊಡಲಾಗಿದೆ. ಆದರೆ ಪಾಪು ಅವರು ಮಾನವರ ಗಟ್ಟಿಯಾದ ನಿಲುವುಗಳನ್ನು ಕುರಿತು ಹೇಳುವುದರಿಂದ ಗಟ್ಟಿಯಾದುದು, ಬಲವಾದುದು ಎಂಬ ಅರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ಮನುಷ್ಯನು ತನ್ನ ಜೀವನದಲ್ಲಿ ಏಳಬಹುದಾದ ಕಷ್ಟಗಳನ್ನು ಮೆಟ್ಟಿನಿಂತು ಅವುಗಳನ್ನು ಎದುರಿಸಬೇಕಾಗುತ್ತದೆ. ಅಂದರೆ ಜೀವನದಲ್ಲಿ ಬರು ಬದುಕಿನ ಬಿರುಗಾಳಿಗಳನ್ನು ಆತನು ಎದುರಿಸಲೇಬೇಕಾಗುತ್ತದೆ. ಪುಟ್ಟಪನವರ ಪ್ರಕಾರ 'ದೃಢತೆ ಇರುವ ಮನುಷ್ಯ ಎಂದಿಗೂ ಸೋಲವುದಿಲ್ಲ. ಎಂಥ ಪ್ರತಿಕೂಲವಾದ ಸಂದರ್ಭದಲ್ಲಿಯೂ ಅವನ ಬಾಯಿಯಿಂದ ಸೋತೆ ಎಂಬ ಮಾತು ಬರುವುದಿಲ್ಲ. ಬದುಕಿನಲ್ಲಿ ದೃಢತಯುಳ್ಳ ಮನುಷ್ಯನಿಗೆ ಅವಭರವಸೆಗಳಿರುವುದಿಲ್ಲ. ಅಹ್ವಾನಿಸುವವನು ಎಂಥ ಬಲಶಾಲಿಯೂ ಆಗಿದ್ದರೂ ದೃಢತೆಯುಳ್ಳ ವ್ಯಕ್ತಿಯ ಮುಂದೆ ಸೋಲುತ್ತಾನೆ. ಜೀವನದಲ್ಲಿ ಬರುವ ಎಂಥ ಕಷ್ಟಗಳಿದ್ದರೂ ವ್ಯಕ್ತಿಯು ಮಾತ್ರ ತನ್ನ ಸೀಮಿತತೆಯನ್ನು ಕಳೆದುಕೊಳ್ಳಬಾರದು. ಹೆದರುವವನನ್ನು ಹೆದರಿಕೆಯು ಹೆದರಿಸುತ್ತದೆ. ಆದರೆ ದೃಢತೆ ಇರುವವನನ್ನು ನೋಡಿ ಹೆದರಿಕೆಯೇ ಹೆದರುತ್ತದೆ'[೩೦] ಎನ್ನುತ್ತಾರೆ.

**ಮೆಚ್ಚುವ ಗುಣ :** ಮೆಚ್ಚುವ ಗುಣವು ಮನಷ್ಯರಲ್ಲಿ ಇರಬೇಕಾದ ಗುಣಗಳಲ್ಲಿ ಒಂದಾಗಿದೆ. 'ಯಾವುದಾದರೂ ಸರಿ ಯೋಗ್ಯವಾಗಿದೆ ಎಂಬುದಿದ್ದರೆ ಅದನ್ನು ಪ್ರಶಂಸೆ ಮಾಡಬೇಕಾಗುತ್ತದೆ. ಪುಟ್ಟಪ್ಪನವರು ಒಳ್ಳೆಯದನ್ನು ಮೆಚ್ಚುವುದು ದೇವರ ಗುಣ'[೩೧] ಎಂದು ಹೇಳುತ್ತಾರೆ. ಒಳ್ಳೆಯ ಗುಣವಿದ್ದವರು ಮಾತ್ರ ಒಳ್ಳೆಯದನ್ನು ಗುರುತಿಸುತ್ತಾರೆ. ಇಲ್ಲದೆ ಹೋದರೆ ಒಳ್ಳಯದನ್ನಾಗಲಿ, ಒಳ್ಳೆಯವರ ಗುಣವನ್ನಾಗಲಿ ಗುರುತಿಸಲು ಸಾಧ್ಯವಿಲ್ಲವೆನ್ನುತ್ತಾರೆ. ಹಾಗಾಗಿ ತನಗಿಂತಲೂ ಶ್ರೇಷ್ಟವಾದುದನ್ನು ಮೆಚ್ಚಿಕೊಳ್ಳುವಂಥ ಗುಣಕ್ಕಿಂತ ಉದಾತ್ತವಾದ ಗುಣಧರ್ಮ ಇನ್ನೊಂದಿಲ್ಲ. ಪ್ರಶಂಸೆಯು ಉದಾತ್ತ ಹೃದಯದ ಜನರಿಗೆ, ಇನ್ನೂ ಹೆಚ್ಚು ಒಳ್ಳೆಯದನ್ನು ಮಾಡಬೇನ್ನುವ ಪ್ರಚೋಧನೆಯನ್ನು ಒದಗಿಸಿಕೊಡುತ್ತದೆ. ಕೆಲವರು ಪ್ರಶಂಸೆಗಳಿಗೆ ಮಾರು ಹೋಗಿ ತಮಗೆ ತಾವೇ ಶ್ರೇಷ್ಠರೆಂಬ ಕಲ್ಪನೆಯಲ್ಲಿ ತೇಲಾಡುತ್ತಾರೆ. ಆದರೆ ಇದು ಸರಿಯಲ್ಲ ಅತಿಯಾದರೆ ಅಮೃತವು ವಿಷವಾಗುವಂತೆ ಮೆಚ್ಚುಗೆಯ ಗುಣವೂ ಅಧೀಕವಾದಾಗ ತಾವೇ ದೊಡ್ಡವರು ಎಂಬ ಅಹಂಕಾರ ತುಂಬಿಕೊಂಡರೆ ತನ್ನ ಅವನತಿಗೆ ತಾನೇ ಕಾರಣನಾಗುತ್ತಾನೆ.

**ವಿಧೇಯತೆ :** ಮಾನವನಲ್ಲಿ ಇರಬೇಕಾದ ಮುಖ್ಯ ಗುಣಗಳಲ್ಲಿ ವಿಧೇಯಕವು ಒಂದು. ವಿಧೇಯತೆ ಎಂಬುದಕ್ಕೆ ಕನ್ನಡ ನಿಘಂಟಿನಲ್ಲಿ ನಮ್ರತೆ, ಸೌಜನ್ಯ, ಎಂಬ ಅರ್ಥಗಳನ್ನು ನೀಡಲಾಗಿದೆ. ವಿಧೇಯಕತೆ ಎಂಬುದು ನಿಸ್ವಾರ್ಥ ಗುಣವೇ ಹೊರತು ಶರಣಾಗತಿ ಇರುವುದಿಲ್ಲ. ಸಂಪೂರ್ಣ ಸಮರ್ಪಣೆ ಇರುತ್ತದೆ. ಈ ವಿಧೇಯಕತೆ ಇರದ ಮನುಷ್ಯನ ಜೀವನವು ಋಕ್ಷ ಭೂಮಿಯಂತೆ ಬರಡೆನಿಸುತ್ತದೆ[೩೨]. ಈ ಗುಣವು ಮನುಷ್ಯನಿಗೆ ಬೇಕಾದ ಆಧಾರವನ್ನು ಆದ್ರತೆಯನ್ನು ಒದಗಿಸುತ್ತದೆ. ಅಲ್ಲದೆ ಮನುಷ್ಯನ ಶ್ರೇಷ್ಟತೆಯು ಆತನ ವಿಧೇಯಕತೆಯಲ್ಲಿರುತ್ತದೆ. ವ್ಯಕ್ತಿಯು ಸಣ್ಣವನೋ ದೊಡ್ಡವನೋ ಅನ್ನುವುದು ಮುಖ್ಯವಲ್ಲ. ಆತನಲ್ಲಿ ವಿಧೇಯತೆ ಇದೆಯೋ ಇಲ್ಲವೋ ಎನ್ನುವುದು ಮುಖ್ಯವಾಗುತ್ತದೆ. ವಿಧೇಯತೆಯುಳ್ಳವನು ಸಣ್ಣವನಾಗಿದ್ದರೂ ದೊಡ್ಡವನೇ ಆಗಿರುತ್ತಾನೆ. ಇಲ್ಲದವನು ದೊಡ್ಡವನಾಗಿದ್ದರೂ ಸಣ್ಣವನಾಗುತ್ತಾನೆ. ಒಂದು ವೇಳೆ ಕೆಲವು ವಿಷಯಗಳಲ್ಲಿ ಮನುಷ್ಯನಲ್ಲಿ ವಿಧೇಯತೆ ಇಲ್ಲದೇ ಹೋದರೆ, ಅವನ ಜೀವನದಲ್ಲಿ ಶಾಂತಿ ಸಮನ್ವಯ ಇರುವುದಿಲ್ಲ. ಮನುಷ್ಯನ ನಿಷ್ಠೆ ವಿಧೇಯತೆಗಳಲ್ಲಿ ನಿರಂತರತೆ ಇದ್ದರೇನೇ ಅವನಿಗೆ ಬೆಲೆ ಇದೆ.

**ನಮ್ರತೆ :** ನಮ್ರತೆಯು ಮಾನವರಲ್ಲಿ ಇರಬೇಕಾದ ಒಂದು ಗುಣವೆಂಬುದನ್ನು ಪಾಪು ಅವರು ಹೇಳುತ್ತಾರೆ. 'ನಮ್ರ' ಎಂಬುದಕ್ಕೆ ಕನ್ನಡ ಸಾಹಿತ್ಯ ನಿಘಂಟಿನಲ್ಲಿ ಬಾಗಿದ, ಬಗ್ಗಿದ, ತಗ್ಗಿಸಿದ, ವಿನಯದಿಂದ ಕೂಡಿದ ಎಂಬ ಅರ್ಥಗಳನ್ನು ನೀಡ ಲಾಗಿದೆ. ಪಾಪು ಅವರು ನಮ್ರತೆ ಎಂಬುದನ್ನು ವಿನಯದಿಂದ ಕೂಡಿರಬೇಕು ಎಂಬ ಅರ್ಥದಲ್ಲಿ ಹೇಳುತ್ತಾರೆ. ಮನುಷ್ಯ ಎಷ್ಟೇ ದೊಡ್ಡವನಾಗಿದ್ದರೂ ಆತನಲ್ಲಿ ವಿನಯದ ಗುಣವಿರಬೇಕಾಗುತ್ತದೆ. ಅಲ್ಲದೆ ವಿನಯದಿಂದ ವರ್ತಿಸುವ ವ್ಯಕ್ತಿಯನ್ನು ಎಲ್ಲರೂ ಪ್ರೀತಿಸುತ್ತಾರೆ. ಏಕೆಂದರೆ ಅಹಾಂಕಾರಕ್ಕೆ ವಿರುದ್ಧವಾದುದೇ ಈ ನಮ್ರತೆಯ ಗುಣವಾಗಿದೆ. ಅದಕ್ಕಾಗಿಯೇ ಪುಟ್ಟಪ್ಪನವರು "ಧಾರ್ಮಿಕರಲ್ಲಿಯೇ ಆಗಲಿ, ಸಾಮಾಜಿಕರಲ್ಲಿಯೇ ಆಗಲಿ ಇರಬೇಕಾದ ಮೊದಲ ಮತ್ತು ಕೊನೆಯ ಗುಣವೆಂದರೆ ನಮ್ರತೆಯೊಂದೆ ಎಂದಿದ್ದಾರೆ. ಅಹಂಕಾರಿಯಾದ ದೇವನೂ ಸಹಿತ ದೇವಾತ ಸ್ವರೂಪವನ್ನು ಕಳೆದುಕೊಂಡು ರಾಕ್ಷರ ಸ್ತಿತಿಗೆ ಇಳಿಯುತ್ತಾರೆ. ಆದರೆ ನಮ್ರತೆಯನ್ನು ಇರಿಸಿಕೊಂಡ ಜನರು ದೇವಾತ ಸ್ವರೂಪವನ್ನು ತಂದುಕೊಳ್ಳುತ್ತಾರೆ"[೩೩] ಎನ್ನುತ್ತಾರೆ. ಮುಂದವರಿದು ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ಕಲಿಯಬೇಕಾದ ಮೊದಲ ಪಾಠವೆನ್ನುತ್ತಾರೆ. ವ್ಯಕ್ತಿಯು ಸೋತಾಗ ತೋರುವ ನಮ್ರತೆಗಿಂತ, ಗೆದ್ದಾಗ, ಉನ್ನತ ಪದವಿಗಳನ್ನು ಗಳಿಸಿದಾಗ ತೋರುವ ನಮ್ರತೆಯು ದೊಡ್ಡ ಗುಣವಾಗಿರುತ್ತದೆ. ನಮಗಿಂತ ಸಣ್ಣವರೊಂದಿಗೆ ನಮ್ರತೆಯಿಂದ ನಡೆದುಕೊಳ್ಳುವುದು ಕರ್ತವ್ಯವಾದರೆ, ಸಮಾನರೊಂದಿಗೆ ನಮ್ರತೆಯಿಂದ ನಡೆದುಕೊಳ್ಳುವುದು ಸಚ್ಚನಿಕೆಯಾಗುತ್ತದೆ. ಅದೇ ಸಣ್ಣವರೊಡನೆ ನಡೆದುಕೊಳ್ಳುವ ನಮ್ರತೆಯು ನಮ್ಮಲ್ಲಿರುವ ಉದಾತ್ತತೆಯಾಗಿರುತ್ತದೆ ಎನ್ನುವ ಮಾತುಗಳಲ್ಲಿ ಸತ್ಯಾಂಶವಿದೆ. ಬೆಳೆಯಬೇಕು ಎಂಬ ಮನುಷ್ಯನಿಗೆ ಮೊದಲು ಇರಬೇಕಾದ್ದದು ನಮ್ರತೆ ಎಂಬುದು ಅವರ ಮಾತಿನ ಹಿಂದಿರುವ ಅರ್ಥವನ್ನು ಗ್ರಹಿಸಬಹುದು.

ಪುಟ್ಟಪ್ಪನವರು ಹೇಳುವಂತೆ ಮನುಷ್ಯನಲ್ಲಿರುವ ನಮ್ರತೆಯನ್ನು ಯಾರು ದೌರ್ಬಲ್ಯವೆಂದು ತಿಳಿಯಬಾರದು. ಆದರೆ ನಮ್ರತೆಯು ನಿಜವಾಗಿರಬೇಕು. ಅದು ಹುಸಿ ನಮ್ರತೆಯಾಗಿರಬಾರದು. ಹುಸು ನಮ್ರತೆಯು ದುರಹಂಕಾರದ ಇನ್ನೊಂದು ರೂಪವಾಗಿದೆ. ನಮ್ರತೆಯು ಭದ್ಮ ವೇಷದಲ್ಲಿದ್ದರೆ ಮಾತ್ರ ಅವುಗಳ ಶ್ರೇಷ್ಟತೆ ಇನ್ನೂ ಹೆಚ್ಚು ಒಡೆದು ಕಾಣುತ್ತದೆ. ಹೀಗಾಗಿ ಮನುಷ್ಯರು ನಮ್ರತೆಯನ್ನು ಹೆಚ್ಚು ಕಾಳಜಿಯಿಂದ ಕಾಯ್ದುಕೊಳ್ಳಬೇಕಾಗುತ್ತದೆ. ಅದನ್ನು ಒಮ್ಮೆ

ಕಳೆದುಕೊಂಡರೆ ಮತ್ತೇ ಮರಳಿ ಪಡೆಯಲಾಗುವುದಿಲ್ಲ. ಉದಾತ್ತತೆ ಇಲ್ಲದಿರುವ ಹೃದಯದಲ್ಲಿ ನಮ್ರತೆ ಬದುಕಿರುವುದು ಸಾಧ್ಯವಿಲ್ಲ[೩೪] ಎಂಬುದು ಪಾಪು ಅವರ ಅಭಿಪ್ರಾಯದಲ್ಲಿ ಯಾವುದೇ ಗೊಂದಲವಿಲ್ಲ.

“ವಿದ್ಯೆಗೆ ವಿನಯವೇ ಭೂಷಣ ಎಂದು ಹೇಳುವ ಮಾತು ಸಣ್ಣದಾಗಿರಬಹುದು. ಆದರೆ, ಅದು ನಿತ್ಯ ನೂತನ. ವಿನಯ ಇದ್ದವನ ವಿದ್ಯೆ, ಇಮ್ಮಡಿ ಶೋಭೆಯಿಂದ ಕಂಗೋಳಿಸುತ್ತದೆ. ನಿಜವಾದ ದೊಡ್ಡ ಮನುಷ್ಯನು ಯಾವನೆಂಬುದನ್ನು ಅವನ ವಿನಯವೇ ತೋರಿಸಿಕೊಡುತ್ತದೆ. . . .ಮನುಷ್ಯನು ದೊಡ್ಡವನಾಗಿ ಬೆಳೆದಷ್ಟೂ, ಅವನಲ್ಲಿ ತಾನೆಷ್ಟು ಚಿಕ್ಕವನು ಎನ್ನುವ ಭಾವನೆ ಸದಾ ಇರಬೇಕು. ಅಂದರೇನೇ ಅವನು ಇನ್ನೂ ಹೆಚ್ಚು ಬೆಳೆಯುತ್ತಾನೆ”[೩೫] ಎನ್ನುತ್ತಾರೆ.

‘ನಮ್ರತೆಯು ಎಲ್ಲಾ ಸದ್ಗುಣಗಳ ಮೂಲದಲ್ಲಿ ಇರುತ್ತದೆ. ನಮ್ರತೆ ಇಲ್ಲದಿದ್ದರೆ ಮಾನವತೆಯೇ ಇರುವುದಿಲ್ಲ. ನಮ್ರತೆಯು ನಮ್ಮ ಬದುಕಿನ ಬೇರು ಆಗಿದೆ. ಅದು ನಮಗೆ ಆರೈಕೆ ನೀಡುವ ತಾಯಿ. ತಮಗಿಂತ ಕಿರಿಯರಿಲ್ಲ ಎನ್ನುವ ಭಾವನೆಯನ್ನು ತಮ್ಮ ಜೀವನದಲ್ಲಿ ಸದಾ ಇರಿಸಕೊಂಡು ನಡೆದುಕೊಂಡರೆನ್ನುವ ಕಾರಣದಿಂದಲೇ ಅವರು, ಇವರು ಎಲ್ಲ ಜನರಿಗಿಂತ ದೊಡ್ಡವರೆನಿಸುತ್ತಾರೆ. ನಮ್ರತೆಯು ದೌರ್ಬಲ್ಯದ ಸಂಕೇತವಲ್ಲ. ಅಂಜುಬುರುಕುತನವೂ ಅಲ್ಲ. ಎಲ್ಲ ಜನರೊಂದಿಗೆ ನಮ್ರತೆಯಿಂದ ನಡೆದುಕೊಳ್ಳುವುದರಿಂದ ಮನುಷ್ಯನಿಗೆ ಸುರಕ್ಷತೆಯನ್ನು ತಂದುಕೊಡುತ್ತದೆ. . . . ನಮ್ರತೆಯೇ ಧರ್ಮದ ಮೂಲವಾಗಿದೆ. ನಮ್ರತೆ ಇಲ್ಲದೇ ಇರುವುದು ಧರ್ಮವೇ ಅಲ್ಲ. ಧರ್ಮದಲ್ಲಿರಬೇಕಾದ ಪ್ರಥಮ, ನಂತರದ, ಕೊನೆಯ ವಸ್ತು ನಮ್ರತೆಯೇ ಆಗಿದೆ’[೩೬] ಎಂಬುದನ್ನು ಪ್ರಸ್ತಾಪಿಸುತ್ತಾರೆ.

ತಾಳ್ಮೆ / ಸಹನೆ : ಜನಪದರು ಹೇಳುವ ಗಾದೆಗಳಲ್ಲಿ ‘ತಾಳಿದವನು ಬಾಳುತ್ತಾನೆ’ ಎಂಬ ಮಾತಿದೆ. ಈ ಮಾತು ವ್ಯಕ್ತಿಯ ಜೀವನದಲ್ಲಿ ಬಹಳಷ್ಟು ಅರ್ಥವನ್ನು ಹೊಂದಿದೆ. ಅವಸರವು ಅಪಾಯಕ್ಕೆ ಕಾರಣವಾಗುತ್ತದೆ. ಆದರೆ ಸಹನೆ ಅಥವಾ ತಾಳ್ಮೆಯು ಇದ್ದ ವ್ಯಕ್ತಿಯು ಜೀವನದಲ್ಲಿ ಮೇಲ್ಮಟ್ಟವನ್ನು ತಲುಪುತ್ತಾನೆ ಎಂಬುದಕ್ಕೆ ನಮ್ಮ ಕಣ್ಣಮುಂದಿರುವ ಸಾಧಕರೇ ಸಾಕ್ಷಿಯಾಗಿ ನಿಲ್ಲುತ್ತಾರೆ. ಪಾಟೀಲ ಪುಟ್ಟಪ್ಪನವರು ಸಹನೆಯಿಂದ ಚಮತ್ಕಾರಿಕೆ ಕೆಲಸ ಆಗುತ್ತದೆ ಎನ್ನುತ್ತಾರೆ. ಸಹನೆಯಿಂದ ಜೀವನದಲ್ಲಿ ಏನನ್ನು ಬೇಕಾದರೂ ಜಯಿಸಬಹುದು. ಆದರೆ ಜೀವನದಲ್ಲಿ ವ್ಯಕ್ತಿಯು ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಅತ್ಯಂತ ಸಹನೆಯಿಂದ ಎದುರಿಸಬೇಕು. ಬರುವ ದುಃಖ ದುಮ್ಮಾನಗಳನ್ನು ಸಹನೆಯಿಂದಲೇ ಎದುರಿಸಬೇಕಾಗುತ್ತದೆ. ಇದರಿಂದ ಮಾನವನು ಜೀವನದಲ್ಲಿ ಸಣ್ಣ ಸಣ್ಣ ಸೋಲುಗಳನ್ನು ಎದುರಿಸಿದರು ಮುಂದೆ ದೊಡ್ಡದನ್ನು ಗೆಲ್ಲುತ್ತೇವೆ ಎಂಬ ವಿಶ್ವಾಸವಿರಬೇಕು. ಆಗ ಆತನ ಬದುಕಿನಲ್ಲಿ ಚಮತ್ಕಾರಿಕೆ ನಡೆಯುತ್ತದೆ[೩೭] ಎನ್ನುತ್ತಾರೆ.

ಮಾನವನ ಗೆಲುವಿನ ಗುಟ್ಟು ಅವನ ತಾಳ್ಮೆಯಲ್ಲಿಯೇ ಇದೆ. ತಾಳ್ಮೆ ಇದ್ದವನಿಗೆ ಎಲ್ಲವೂ ಇರುತ್ತದೆ. ಬಲವಾದ ಮನೋಭಾವನೆಗೆ ತಾಳ್ಮೆಯು ಅತಿ ಅವಶ್ಯಕ. ತಾಳ್ಮೆಗಿಂತಲೂ ಶಕ್ತಿಯುತವಾದದ್ದು ಬೇರೊಂದಿಲ್ಲ. ಅದಕ್ಕಾಗಿಯೇ ದೊಡ್ಡವರ ಕುರಿತು ಹೇಳುತ್ತಾ “ದೊಡ್ಡವರಾದ ಅನೇಕರಲ್ಲಿ ಅತ್ಯಗತ್ಯವಾಗಿಯೂ ದೊಡ್ಡ ಶಕ್ತಿ ಇದೆಯೆಂದು ಅವರು ದೊಡ್ಡವರಾಗಿಲ್ಲ. ದೊಡ್ಡದಾದ, ಭವ್ಯವಾದ ಭೂಮವಾದ ಶಕ್ತಿಯು ಬೇರೆ ಇನ್ನೇನೂ ಅಲ್ಲ. ಅದು ಬಹುತೇಕವಾಗಿ ಸಾಮಾನ್ಯ ಸಹನೆಯಾಗಿದೆ. ತಾಳಿಕೊಂಡು ಹೋಗುವ ಗುಣಧರ್ಮ ಇದೆ ಎನ್ನುವ ಕಾರಣದಿಂದಲೇ ಸಹನೆಯು ಅಸಮಾನ್ಯತೆಯನ್ನು ಪಡೆದುಕೊಂಡಿದೆ. ಯಾವನಿಗೆ ಸಹನೆ ಇದೆಯೋ ಅವನಿಗೆ ಎಲ್ಲವೂ ಇದೆ. ಧೈರ್ಯದಿಂದ ಮಾತನಾಡುವುದು, ಧೈರ್ಯದ ಬಗೆಗೆ ಮಾತನಾಡುವುದು ದೊಡ್ಡದಲ್ಲ; ಆದರೆ ತಾಳ್ಮೆ ಇರಿಸಿಕೊಂಡು ಹೋಗುವುದೇ ಜೀವನದಲ್ಲಿ ದೊಡ್ಡದು. ಸಹನೆಯೇ ಸ್ಫೋಟಗೊಂಡಿತೆಂದರೆ ಅದರ ಎದುರು ಯಾವುದೂ ತಡೆದು ನಿಲ್ಲುವುದಿಲ್ಲ[೩೮]” ಎನ್ನುತ್ತಾರೆ. ಅದು ನಿಜವೆ ಅನಿಸುತ್ತದೆ. ತಾಳ್ಮೆಯು ತಪ್ಪಿದಾಗ ಮನಷ್ಯನು ಸಹಿತ ವ್ಯಾಘ್ರನಾಗುತ್ತಾನೆ. ತಾಳ್ಮೆಗೂ ಒಂದು ಇತಿಮಿತಿ ಇರುತ್ತದೆ. ಅದು ಮೀರದಂತೆ ವರ್ತಿಸಬೇಕಾಗುತ್ತದೆ.

ತಾಳ್ಮೆಯು ವ್ಯಕ್ತಿ ಜೀವನದಲ್ಲಿ ಅತಿ ಮುಖ್ಯವಾದ ಗುಣವಾಗಿದೆ. ‘ಜೀವನದಲ್ಲಿ ಎದುರಾಗುವ ದುಃಖ, ಸಂಕಷ್ಟ, ಗಂಡಾಂತರ ಹಾಗೂ ಅನಿಷ್ಟಗಳಿಂದ ಸಂಭವಿಸಬಹುದಾದ ಅನಾಹುತಗಳ ಬಗೆಗೆ ಪ್ರಜ್ಞೆಯನ್ನಿರಿಸಿಕೊಂಡು ತಾಳ್ಮೆಯನ್ನು ತನ್ನ ಜೀವನದಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಬದುಕಿನಲ್ಲಿ ಉರಿಯೇ ಬರಲಿ, ಸಿರಿಯೇ ಬರಲಿ ಎಂದಿಗೂ ತಾಳ್ಮೆಯನ್ನು ಕಳೆದುಕೊಳ್ಳದಿರುವುದರಿಂದ ವ್ಯಕ್ತಿಗೆ ಹೆಚ್ಚು ಲಾಭವಿರುತ್ತದೆ. ತಾಳ್ಮೆಯು ಮನುಷ್ಯರಿಗೆ ಧೈರ್ಯವನ್ನು ತಂದುಕೊಡುತ್ತದೆ. ಆ ಧೈರ್ಯದಲ್ಲಿ ಎಂದಿಗೂ ಸಹನೆ ಇರುತ್ತದೆ. ಸಹನೆಯನ್ನು ದೌರ್ಬಲ್ಯವೆಂದು ಭಾವಿಸಬಾರದು. ಸುಮ್ಮನಿರುವ ಮನುಷ್ಯನ ಕೋಪಾಟೋಪಕ್ಕೆ ಹೆದರಿಕೊಳ್ಳಬೇಕೆಂದು ಹೇಳುವ ಂಆತು ಸುಮ್ಮನೆ ಬರಲಿಲ್ಲ. ತಾಳ್ಮೆ ಕಳೆದುಕೊಂಡವನಿಗಿಂತಲೂ, ತಾಳ್ಮೆ ಉಳಿಸಿಕೊಂಡ ಮನುಷ್ಯ ಹೆಚ್ಚು ಕಾಲ ಬದುಕುತ್ತಾನೆ. ತಾಳ್ಮೆಯು ನಮಗೆ ಜೀವನವನ್ನು ಕೊಡುತ್ತದೆ. ಬದುಕುವುದನ್ನೂ ಕಲಿಸಿಕೊಡುತ್ತದೆ. ತಾಳ್ಮೆಯಿಂದ ಇರುವ ಮನುಷ್ಯನಲ್ಲಿ ಧೈರ್ಯ ಶೇಖರಣೆಗೊಂಡಿರುತ್ತದೆ’[೩೯] ಎನ್ನುತ್ತಾರೆ.

**ಸತತ ಪ್ರಯತ್ನ :** ವ್ಯಕ್ತಿಯ ಸಾಧನೆಯು ಸತತ ಪ್ರಯತ್ನದ ಫಲವಾಗಿರುತ್ತದೆ. ಆದ್ದರಿಂದ ಜೀವನದಲ್ಲಿ ನಾವು ಎಂದಿಗೂ ಪ್ರಯತ್ನವನ್ನು ಬಿಡಬಾರದು. ಪ್ರಯತ್ನವಿಲ್ಲದೆ ಉತ್ತಮವಾದ ಫಲವಾಗಲಿ, ಜಯವಾಗಲಿ ನಮಗೆಂದೂ ದೊರಕುವುದಿಲ್ಲ. ಹಾಗಾಗಿ ಮನುಷ್ಯನು ಶ್ರದ್ಧೆಯನ್ನಿರಿಸಿಕೊಂಡು ನಿತ್ಯ ಪ್ರಯತ್ನ ಶೀಲನಾಗಿರಬೇಕು. ಪುಟ್ಟಪ್ಪನವರು ಸತತ ಪ್ರಯತ್ನಕ್ಕೆ ಫಲಸಿದ್ಧಿ ಇದ್ದೇ ಇದೆ ಎನ್ನುತ್ತ “ಯಾವ ಮನುಷ್ಯ ತನಗೆ ಸರಿಯಾಗಿ ನಿದ್ರೆ ಬಂದಿಲ್ಲವೆಂದು ಗೊಣಗುವವನೋ, ಅವನು ಸರಿಯಾಗಿ ಪರಿಶ್ರಮಪಟ್ಟಿಲ್ಲವೆಂದು ತಿಳಿಯಬೇಕು. ಪ್ರಯತ್ನಶಾಲಿಯಾದ ಶ್ರಮಜೀವಿ ಮನುಷ್ಯನನ್ನು ನಿದ್ರೆ ಹುಡುಕಿಕೊಂಡು ಬರುತ್ತದೆ. ನಿಚ್ಚಳವಾದ ಅಂತರಾತ್ಮ ಇರಿಸಿಕೊಂಡು ಯಾವನು ತನ್ನ ಹಾಸುಗೆಯಲ್ಲಿ ಒರಗಿಕೊಳ್ಳುವನೋ ಅವನನ್ನು ನಿದರೆಯೆಂದೂ ವಂಚಿಸುವುದಿಲ್ಲ. ನಾವು ಯಾವನಾದರೂ ಒಬ್ಬನ ಮುಖವನ್ನು ನೋಡಬೇಕೆನ್ನುವುದಾದರೆ ಪ್ರಯತ್ನಶಾಲಿಯ ಮುಖವನ್ನು ನೋಡಬೇಕು. ಹಾರೆ ಗುದ್ದಲಿ ಸಲಿಕೆಗಳು ಸಣ್ಣದಿರಬಹುದು. ಆದರೆ, ಒಂದು ಪರ್ವತವನ್ನು ಸವೆಸಿ, ಸರಿಸಲು ಅವೇ ಬೇಕಾಗುತ್ತವೆ”[೪೦] ಎನ್ನುತ್ತಾರೆ. ಈ ಮಾತಿನ ಹಿಂದಿರುವ ಮರ್ಮವೆಂದರೆ, ವ್ಯಕ್ತಿಯೂ ಜೀವನದಲ್ಲಿ ಸಣ್ಣ ಸಣ್ಣ ಪ್ರಯತ್ನಗಳ ಮೂಲಕವೇ ದೊಡ್ಡದನ್ನು ಸಾಧಿಸಲು ಸಾಧ್ಯವಾಗುತ್ತದೆ. ಸೋತೆ ಎನ್ನುವ ನೆಪವೊಡ್ಡಿ ಮುಂದಿನ ಗೆಲವಿಗೆ ಪ್ರಯತ್ನ ಪಡದೆ ಹೋದರೆ ಜಯವು ಎಂದಿಗೂ ಲಭಿಸುವುದಿಲ್ಲ.

ವ್ಯಕ್ತಿಯು ತಾನು ಬಯಸಿದಂತೆ ಬದುಕಬೇಕೆಂದು ಕನಸು ಕಾಣುವುದು ಸಹಜ. ಆದರೆ ಆ ಕನಸು ಸಾಕಾರಗೊಳ್ಳಬೇಕೆಂದರೆ ಸತತವಾದ ಪ್ರಯತ್ನಗಳು ಬೇಕಾಗುತ್ತವೆ. ಕೇವಲ ಆಸೆಗಳನ್ನು ಹೊಂದಿದ್ದರೆ ಸಾಲದು ಅದರ ಜೊತೆಯಲ್ಲಿಯೇ ಅದನ್ನು ಈಡೇರಿಸಿಕೊಲ್ಲುವ ನಿಟ್ಟಿನಲ್ಲಿ ಪ್ರಯತ್ನಗಳು ಇರಬೇಕಾಗುತ್ತದೆ. “ಜೀವನದಲ್ಲಿ ಸಾಧಿಸಬೇಕೆಂದು ಇರಿಸಿಕೊಂಡ ಉದ್ದೇಶ ಸಫಲವಾಗಬೇಕಾದರೆ ಅದರ ಬಗೆಗೆ ಎರಡಿಲ್ಲದಂಥ ಏಕಮನಸ್ಸಿನ ನಿರಂತರ ಪ್ರಯತ್ನ ಇರಬೇಕು. ಅರ್ಧ ಮನಸ್ಸಿನ ಅರೆಬರೆ ಪ್ರಯತ್ನ

ಯಾವ ಫಲವನ್ನೂ ಕೊಡುವುದಿಲ್ಲ”೪೧ ಎನ್ನುತ್ತಾರೆ.

**ಪ್ರಾಮಾಣಿಕತೆ :** ಮನುಷ್ಯರ ಜೀವನದಲ್ಲಿ ಪ್ರಾಮಾಣಿಕತೆಯು ಹೆಚ್ಚು ಪರಿಣಾಮವನ್ನುಂಟುಮಾಡುತ್ತದೆ. ಪ್ರಾಮಾಣಿಕತೆ ಎಂದರೆ; ನಂಬಿಕೆಗೆ ಅರ್ಹವಾಗಿರುವುದು ಎಂದರ್ಥ. ನಂಬಿಕೆಗೆ ಅರ್ಹನಾಗದ ವ್ಯಕ್ತಿಯೂ ಎಂದಿಗೂ ಪ್ರಾಮಾಣಿಕನಾಗಿರಲು ಸಾಧ್ಯವಿಲ್ಲ. ಮಾನವರಲ್ಲಿರಬೇಕಾದ ಮುಖ್ಯ ಗುಣಗಳಲ್ಲಿ ಇದೂ ಒಂದಾಗಿದೆ. ಇಂಥ ಪ್ರಾಮಾಣಿಕತೆಯನ್ನು ಕುರಿತು ಪುಟ್ಟಪ್ಪನವರು ಹೇಳುವ ಮಾತುಗಳು ಹೆಚ್ಚು ಅರ್ಥಪೂರ್ಣವೆನಿಸುತ್ತವೆ. ಅವರು ಹೇಳುವಂತೆ ‘ಪ್ರಾಮಾಣಿಕತೆಯು ದೇವರು ನಿರ್ಮಿಸಿದ ಅತ್ಯಂತ ಉದಾತ್ತ ಕೃತಿ. ಮನುಷ್ಯನು ತನ್ನಷ್ಟಕ್ಕೆ ತಾನು ಪ್ರಾಮಾಣಿಕನಾಗಿ ನಡೆದುಕೊಂಡರೆ ಸಾಕು. ಅದು ಈ ಜಗತ್ತಿಗೆ ಮಾಡುವ ಬಹುದೊಡ್ಡ ಉಪಕಾರ. ಏಕೆಂದರೆ ಪ್ರಾಮಾಣಿಕತೆಯಿಂದ ನಡೆದುಕೊಳ್ಳುವುದರಿಂದ ಜಗತ್ತಿನಲ್ಲಿ ಒರ್ವ ಘಟಿಂಗನು ಕಡಿಮೆಯಾದಂತಾಗುತ್ತಾನೆ. ಹಾಗಾಗಿ ಎಂಥ ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಹಿತ ತನ್ನ ಪ್ರಾಮಾಣಿಕತೆಯನ್ನು ಬಿಡಬಾರದು. ಪ್ರಾಮಾಣಿಕರೆಂಬಂತೆ ಬಿಂಬಿಸಿಕೊಳ್ಳಲೂ ಬಾರದು. ಪ್ರಾಮಾಣಿಕತೆಯೂ ಸರ್ವತ್ರವೂ ಆಗಿರಬೇಕು. ಅದು ನಮ್ಮ ಮಾರ್ಗದರ್ಶಕ ಸೂತ್ರವಾಗಬೇಕು. ಪ್ರಾಮಾಣಿಕತೆಯು ಮಾನವನ ಊರುಗೋಲಾಗಬೇಕು’೪೨ ಎಂಬುದಾಗಿ ತಿಳಿಸುತ್ತಾರೆ.

ಪುಟಪ್ಪನವರು ಹೇಳುವಂತೆ “ಯಾವ ಮನುಷ್ಯನು ತನ್ನಷ್ಟಕ್ಕೆ ತಾನು ಪ್ರಾಮಾಣಿಕನಾಗಿರುವನೋ, ವನು ಇನ್ನೊಬ್ಬರೊಮದಿಗೆ ಸುಳು ರೀತಿಯಿಂದ ನಡೆದುಕೊಳ್ಳಲು ಸಾಧ್ಯವೇ ಇಲ್ಲ. ಮನುಷ್ಯನು ಕೆಳಗೆ ಬೀಳಲಿ, ಉಪವಾಸ ಇರಲಿ, ಪ್ರಾಮಾಣಿಕತೆಗೆ ಅಂಟಿಕೊಂಡು ಉಳಿಯಬೇಕು. ಅನ್ಯಾಯಕ್ಕೋಸುಗ ಏನನ್ನೂ ಮಾಡಲೂ ಸಿದ್ದನೆನ್ನುವ ಅಪಖ್ಯಾತಿಯನ್ನು ಕಟ್ಟಿಕೊಳ್ಳಬಾರದು”೪೩ ಎನ್ನುತ್ತಾರೆ. ಆಲ್ಲದೇ ‘ಪ್ರಾಮಾಣಿಕತೆ ರಾಷ್ಟ್ರಪತಿ, ಪ್ರಧಾನಮಂತ್ರಿ ಪದವಿಗಿಂತಲೂ ಮಿಗಿಲಾದುದು, ಅಪ್ರಾಮಾಣಿಕನನ್ನುವುದಕ್ಕಿಂತ ಅವಾಚ್ಯ ಶಬ್ದ ಮತ್ತೊಂದಿಲ್ಲ’೪೪ ಎಂದಿದ್ದಾರೆ. ಹಾಗಾಗಿ ಮನುಷ್ಯರು ಆಡುವಂತೆ ಇರುವುದು, ಇರುವಂತೆಯೇ ಆಡುವ ಗುಣವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇದರಿಂದ ಮನುಷ್ಯನ ಪ್ರಾಮಾಣಿಕತೆಯು ಇರುವುದು ಕಂಡುಬರುತ್ತದೆ. ಇದನ್ನು ಅಳೆಯುವ ಏಕಮಾನ ಮಾನದಂಡವೆಂದರೆ ಅದು ಕೊಟ್ಟ ಮಾತನ್ನು ನಡೆಸಿಕೊಡುವುದೇ ಆಗಿದೆ.

ಜಗತ್ತಿನಲ್ಲಿ ಯಾರು ಹೇಗೆ ಇರಲಿ ಮೊದಲು ನಾವು ಪ್ರಾಮಾಣಿಕರಾಗಿರಬೇಕಾಗುತ್ತದೆ. ಬೇರೋಬ್ಬರು ಪ್ರಾಮಾಣಿಕರಾಗಿಲ್ಲ ಎಂಬುದು ಮುಖ್ಯವಲ್ಲ. ನಾವು ಪ್ರಾಮಾಣಿಕರಾಗಿರುವುದೇ ಮುಖ್ಯ. ಬೇರೆಯವರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಪ್ರಾಮಣಾಣಿಕ ಮನುಷ್ಯರನ್ನು ಕಂಡು ಸುತ್ತಮುತ್ತಲಿನ ಜನರು ಸಹಿತ ಪ್ರಾಮಾಣಿಕರಾಗಲು ಪ್ರಯತ್ನಿಸುತ್ತಾರೆ.

ಹೀಗೆ ಪುಟ್ಟಪ್ಪನವರು ಒರ್ವ ಉತ್ತಮ ಮನುಷ್ಯನಲ್ಲಿ ಇರಬೇಕಾದ ಗುಣಗಳ ಕುರಿತಾಗಿ ತಿಳಿಸುತ್ತಾರೆ. ಅಲ್ಲದೆ ಈ ಗುಣಗಳಲ್ಲಿ ಏನಾದರೂ ವ್ಯತ್ಯಾಸವಾದರೆ ಅದು ನಮ್ಮ ವ್ಯಕ್ತಿತ್ವವನ್ನೇ ಕಳೆದು ಬಿಡುತ್ತವೆ. ಮನುಷ್ಯರು ಯಾವಾಗಲೂ ಮಾನವೀಯ ಮೌಲ್ಯವುಳ್ಳ ವ್ಯಕ್ತಿತ್ವವನ್ನು ಹೊಂದಿರಬೇಕು. ಇದರಿಂದ ಸುತ್ತಮುತ್ತಲಿನ ಸಮಾಜಕ್ಕೂ ವೈಯಕ್ತಿಕವಾಗಿಯೂ ಹೆಚ್ಚು ಅನುಕೂಲವಾಗುತ್ತದೆ.

**ಕೊನೆ ಟಿಪ್ಪಣಿ**

1. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೨೬
2. ಅದೇ, ಪು.೧೪
3. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೧೩೩
4. ಅದೇ, ಪು.೧೫೩
5. ಅದೇ, ಪು.೨೨೦
6. ಅದೇ, ಪು.೨೯೨
7. ಅದೇ, ಪು.೧೫೩
8. ಅದೇ, ಪು.೧೫೫
9. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೨೩
10. ಅದೇ, ಪು.೨೭
11. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೧೯೮
12. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೩೭
13. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೧೫೯
14. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೪೯
15. ಅದೇ, ಪು.೯೭
16. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೪
17. ಅದೇ, ಪು.೪
18. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು. ೯೧
19. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೨೩೦
20. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೯೩
21. ಅದೇ, ಪು.೪೮
22. ಅದೇ, ಪು.೫೮
23. ಅದೇ, ಪು.೯೯
24. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೩೪೮
25. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೨೫೫
26. ಅದೇ, ಪು.೨೬೩
27. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೧೧೦
28. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೬೪
29. ಅದೇ, ಪು.೨೧೫
30. ಅದೇ, ಪು.೧೫೨
31. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೩೬೧
32. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೨೨
33. ಅದೇ, ಪು.೧೨೦
34. ಅದೇ, ಪು.೧೮೩
35. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೧೩೭
36. ಅದೇ, ಪು.೩೦೭
37. ಮಾತು ಮಾಣಿಕ್ಯ, ಡಾ.ಪಾಟೀಲ ಪುಟ್ಟಪ್ಪ, ಪು.೧೬೭
38. ಅದೇ, ಪು.೧೮೮
39. ಬದುಕುವ ಮಾತು, ಡಾ.ಪಾಟೀಲ ಪುಟ್ಟಪ್ಪ, ಪು.೭೭
40. ಅದೇ, ಪು.೪೦
41. ಅದೇ, ಪು.೨೫೫
42. ಅದೇ, ಪು.೧೨
43. ಅದೇ, ಪು.೧೧೩
44. ಅದೇ, ಪು.೧೧೩